

ಸಂಪುಟ ೯ | ಜೂನ್ ೧೯೫೦ | ಸಂಚಿಕೆ ೩

ಕು ಹ ಕಿ ಡಿ ಗ ಳು

ಕೆರೆ ಕಟ್ಟೆಗಳ ಮೇಲೆ ಒಂದು ಪ್ರಹಸನವನ್ನು ಯುವಕರು ಆಡಬೇಕೆಂದಿರುವರಂತೆ.

—ಆಗಲೇ ವಿಮರ್ಶಕರು, ಸರ್ಕಾರದ ಮುಂದೆ ಸ್ವತಂತ್ರ ಉದ್ಯಮಗಳು ಏನೂ ಶೋಭಿಸುವುದಿಲ್ಲ ಎಂದು ಹೇಳುತ್ತಿದ್ದಾರಂತೆ.

* * * *

ಕಲ್ಕತ್ತಾದಲ್ಲಿ ಹೆಂಗಸರು ಈಗ ಪೋಲೀಸಿಗೆ ಸೇರಿ ವಾಹನಗಳಿಗೆ ಮಾರ್ಗದರ್ಶಿಗಳಾಗಿದ್ದಾರಂತೆ.

—ಇನ್ನು ಮೇಲೆ ಅನಾಹುತಗಳಾದಾಗ ವಾಹನೀಕರ ಸಬೂಬು ಗೊತ್ತೇಯಿದೆ. "ಪೋಲೀಸಿನವನನ್ನೇ ನೋಡುತ್ತಾ ಕಂಭಕ್ಕೆ ಡಿಕ್ಕಿ ಹೊಡೆದೆ" ಎಂತ.

* * * *

ನಮ್ಮ ಭಾರತದ ಸಚಿವರುಗಳ ಮನಸ್ಸು ನಾಲಿಗೆ ತುದಿಯಲ್ಲೇ ಇರುತ್ತೆ-ಪತ್ರಿಕೆ.

—ಆದಕ್ಕೇ ಅಷ್ಟು ಅವಸರದ ಹೇಳಿಕೆಗಳು ಅಲ್ಲವೇ ?

* * * *

ಕೃಷ್ಣರಾಜಸಾಗರದಲ್ಲಿ ನೀರು ಬತ್ತಿಹೋದುದರಿಂದ, ಮೈಸೂರಿನಲ್ಲಿ 'ರೂಪಾಯಿಗೆ ಒಂದು ಸೇರು ಹಾಲು' ಒಂದು ಬಾಟಲ್ ಔಷಧಿ ಆಗಿದೆಯಂತೆ.

* * * *

ಪಾಕಿಸ್ಥಾನದ ಸಿಡಿಮದ್ದು ಗುಂಡುಗಳು ಅಂಬಾಯ್‌ನಲ್ಲೇ ಆಸ್ಫೋಟನೆಗೆ ಶುರು ಮಾಡಿದಂತೆ.

*   *   *   *

ಶಾಂತಿದೂತನಾಗಿ ದೇಶವೆಲ್ಲಾ ಹಾರಾಡಿ ಬಂದ ಟ್ರಿಗ್ವಿಲೀ ಅವರನ್ನು ಯುನೋದಲ್ಲಿ ಇನ್ನು ಮೇಲೆ "ಶ್ರೀ ಕೃಷ್ಣಪರಮಾತ್ಮ" ಎಂದು ಕರೆದರಂತೆ.

—ಅಂದರೆ ಈ ಶಾಂತಿದೂತನೂ ಕುರುಕ್ಷೇತ್ರಕ್ಕೆ ಕಾರಣನಾಗುತ್ತಾನೆ ಎಂದೇ ?

*   *   *   *

ವೆಸ್ಟ್ ಇಂಡೀಸ್, ಪೌರುಷ ಎಲ್ಲಾ ನಮ್ಮ ಇಂಡಿಯಾ ಮುಂದೆ ಮಾತ್ರ!

—ಇಂಗ್ಲೆಂಡಿನ ಸ್ಕೋರುಗಳನ್ನು ನೋಡಿದರೆ ! ಅಲ್ಲವೇ ?

*   *   *   *

ಕಲ್ಕತ್ತಾದಲ್ಲಿ ಎರಡು ಗೂಳಿಗಳು ಟೆಲಿಫೋನ್ ಕಛೇರಿಯ ಮುಂದೆ ಕಾಳಗ ಮಾಡಿದುವಂತೆ.

—ಎರಡಕ್ಕೂ ತಪ್ಪು ನಂಬರು ಸಿಕ್ಕಿರಬೇಕು.

*   *   *   *

"ಒಂದಾಣೆ ನುಂಗಿದೆ ಮಗು, ದಯವಿಟ್ಟು ತೆಗೆಯಿರಿ" ಎಂದು ತಾಯಿ ಅಳುತ್ತಾ ಮಗುವನ್ನು ಡಾಕ್ಟರಿಗೆ ತೋರಿಸಿದಳಂತೆ.

—ಆತ "ಅಮ್ಮಾ! ಹೊಟ್ಟೇಗೆ ಹೋದ ಆಣೆ ತೆಗೆಯಬೇಕಾದರೆ ಡಾಕ್ಟರಿಗೆ ಸಾಧ್ಯವಿಲ್ಲ—ಆ ತೆರಿಗೆ ಅಧಿಕಾರಿ ಹತ್ತಿರ ಹೋಗಿ—ಅವ ಏನನ್ನಾದರೂ ತೆಗೀತಾನೆ"—ಎಂದನಂತೆ.

*   *   *   *

ಲೇಡಿ ಡಾಕ್ಟರ್ ಮೊದಲು ಬಂತು, ರಘು ಹಿಂದೇನೇ ಬಂತು, ಎಲ್ಲಾ ಕಳಕೊಂಡೆ.

— ಎಂದು ರೇಸ್‌ಕೋರ್ಸ್‌ನ ಹತ್ತಿರ ಮಾತನಾಡಿಕೊಳ್ಳುತ್ತಿದ್ದರು.

*   *   *   *

ಪಂಡಿತ ನೆಹ್ರೂ ಅವರು ಇಂಡೋನೇಷ್ಯಾಕ್ಕೆ ಹೋಗಿಬರುವರಂತೆ

—ಅಂದರೆ ಇನ್ನೆರಡು ತಿಂಗಳಿಗೆ ಲಿಯಾಕತ್ ಆಲಿಖಾನ್‌ರವರು ಹೊರಡುತ್ತಾರೆ ಎನ್ನುವುದು, ಖಚಿತವಾಗಿ ಗೊತ್ತಿಲ್ಲವಂತೆ.

*   *   *   *

ಇಂಗ್ಲೆಂಡಿನಲ್ಲಿ ಪೆಟ್ರೋಲ್ ರೇಷನಿಂಗ್ ತೆಗೆದರೆ ಭಾರತದಲ್ಲಿ ಕಾರುಗಳ ಬೆಲೆ ಏರಿತಂತೆ.

—ಸ್ವಾತಂತ್ರ ದೇಶ ನಮ್ಮದು—ಯಾರೋ ಎಲ್ಲೋ ಹೊಡೆದರೆ ದವಡೆ ಹಲ್ಲು ಉದುರಿತಂತೆ.

*   *   *   *

ಉರಿಗಾಳು

"ಕನ್ನಂಬಾಡಿ ಬತ್ತಿದಾಗ ಅಲ್ಲಿದ್ದ ಮೊಸಳೆಗಳೆಲ್ಲ ತುಂಬ ಒದ್ದಾಡಿದುವು. ಪಾಪ, ಎಂದೂ ಇಲ್ಲದ ಕಷ್ಟ ಅವುಗಳಿಗೊದಗಿತು" (ಪತ್ರಿಕೆ) ಅದನ್ನು ಕಣ್ಣಾರ ಕಂಡ ಹಲವು ಮೊಸಳೆಗಳೂ ಈ ವಿಷಯವಾಗಿ ನಮಗೆ ಪತ್ರ ಬರೆದಿರುತ್ತಾರೆ.

*　　　*　　　*　　　*

ರಿಕ್ಷಾ ಎಳೆಯುವುದನ್ನು ಬೆಂಗಳೂರು ನಗರದಲ್ಲಿ ನಿಲ್ಲಿಸಬೇಕೆಂಬ ಠರಾವು ಮೊನ್ನೆ ನಗರ ಸಭೆಯಲ್ಲಿ ಪಾಸಾಯಿತು........ನೋಡೋಣ, ಇನ್ನೆಷ್ಟು ದಿನ ಎಳೆಯುತ್ತೋ?

*　　　*　　　*　　　*

ಪರ್ಜನ್ಯ ಜಪಸಮೂಹಗಳನ್ನು ಸಹಾರಾ ಮರುಭೂಮಿಯಲ್ಲಿ ಶಾಶ್ವತವಾಗಿ ನೆಲೆಸಲು ಕಳುಹಿಸುವಂತೆ ಭಾರತ ಸರ್ಕಾರಕ್ಕೆ ಆಹ್ವಾನ ಬಂದಿದೆಯಂತೆ........ ಆಗ, ಭಾರತವೇ ಸಹಾರಾ ಆಗುವುದಿಲ್ಲವೆ?

*　　　*　　　*　　　*

ಮಳೆಯೇ ಬರದಿರಲು ಯಾವ ಅಧರ್ಮ ಕಾರಣ ಎಂದು ಸಾರ್ವಜನಿಕರು ಸಂಶೋಧನೆ ನಡೆಯಿಸುತ್ತಿರುವುದಕ್ಕೂ, ಊರಿಂದೂರಿಗೆ ಹಲವರು ಪ್ರವಾಸ ಹೋಗುತ್ತಿರುವುದಕ್ಕೂ, ಯಾವ ಸಂಬಂಧವೂ ಇಲ್ಲವಂತೆ... ....ಏಕೆಂದರೆ ಅವರು ಹೋದಕಡೆಯೂ ಮಳೆ ಇಲ್ಲ, ಬಿಟ್ಟ ಕಡೆಯೂ ಮಳೆ ಇಲ್ಲ,

*　　　*　　　*　　　*

ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವಾಗ ಏಕೆ ಉತ್ಸಾಹ ತೋರಿಸುತ್ತಿಲ್ಲ ಎಂಬ ಪ್ರಶ್ನೆಗೆ, ನಮಗೆ ಯಾವುದನ್ನ ಕಲಿಸಬೇಕು, ಯಾರು ಕಲಿಸಬೇಕು, ಹೇಗೆ ಕಲಿಸಬೇಕು, ಏಕೆ ಕಲಿಸಬೇಕು, ಎಷ್ಟು ಕಲಿಸಬೇಕು ಎಂಬ ಸಮಸ್ಯೆಗಳೇ ಇನ್ನೂ ಇತ್ಯರ್ಥವಾಗದೆ ಕುಳಿತಿರುವಾಗ, ನಮಗೆ ಉತ್ಸಾಹ ಹೇಗೆ ಬಂದೀತು,-ಎಂಬ ಉತ್ತರ ಬಂತಂತೆ.

*　　　*　　　*　　　*

ಕಣ್ಣಿಗೆ ಕಾಣಿಸದ ರಶ್ಮಿಗಳನ್ನು ಪಾಕಿಸ್ತಾನ್ ವಿಜ್ಞಾನಿಗಳೊಬ್ಬರು ಪತ್ತೆ ಹಚ್ಚಿರುವರಂತೆ........ದಯೆ ನ್ಯಾಯ ನೀತಿ ಮುಂತಾದವು ಕಣ್ಣಿಗೆ ಕಾಣಿಸದೆ ಇದ್ದರೂ ರಶ್ಮಿಗಳಂತೆ ಫಲಪ್ರದವೆಂದು ಪಾಕಿಸ್ತಾನದವರು ಕಂಡುಹಿಡಿದದ್ದು ಶ್ಲಾಘನೀಯ

*　　　*　　　*　　　*

ಜುಲೈ ೧ ರಿಂದ ೭ ರವರೆಗೆ ದೇಶದಲ್ಲೆಲ್ಲ ವೃಕ್ಷಗಳನ್ನು ನೆಡಬೇಕೆಂದು ಶ್ರೀ ಮುನ್‌ಷಿಯವರು ಸಲಹೆ ಇತ್ತಿದಾರೆ. ಅನೇಕರಿಗೆ ತಮ್ಮ ವಂಶ ವೃಕ್ಷಗಳನ್ನು ನಟ್ಟು ಬೆಳಸಲು ಇದೀಗ, ಸುಸಮಯ

*　　　*　　　*　　　*

ಕೂಡಲೇ ೫೦ ಲಕ್ಷ ಮರಗಳನ್ನು ನಾವು ನೆಟ್ಟರೆ. ಅವು ಬೆಳೆದು ಗಗನ ಮಾರ್ಗದಲ್ಲಿ ಸಂಚರಿಸುವ ಮೋಡಗಳನ್ನು ತಡೆದು ಮಳೆ ಹುಯ್ಯಿಸಿ ಕೆರೆ ಕಟ್ಟೆ ತುಂಬಿ ಕಾಲುವೆಗಳಲ್ಲಿ ನೀರು ಹರಿದು ಗದ್ದೆಗಳಿಗೆ ಹಾಯ್ದು ಪಯಿರು ಬೆಳದು ತೆನೆಬಿಟ್ಟು ಸುಗ್ಗಿಯಾಗಿ ಧಾನ್ಯ ರೇಷನ್ ಡಿಪೋಗಳಿಗೆ ಬಂದು ಜನರು ಸುಖ ವಾಗಿರಬಹುದೆಂಬುದೇ ನನ್ನ ಆಶಯ— ಎಂದು ಹೊಸ ಆಹಾರ ಮಂತ್ರಿ ಹೇಳಿ ರುವುದು ನಮ್ಮ ಮೊಮ್ಮಕ್ಕಳಿಗೆ ತುಂಬಾ ಆಶಾದಾಯಕವಾಗಿದೆ.

*　　　*　　　*　　　*

ಮುಂದಿನ ಚುನಾವಣೆಗಳಲ್ಲಿ ಜಯಗಳಿಸಬೇಕೆಂಬ ಉದ್ದೇಶದಿಂದ ನಾವು ಈಗ ಕೆಲಸ ಮಾಡುತ್ತಿದ್ದೇವೆ-ಎಂಬ ಆರೋಪಣೆ ಶುದ್ಧ ಸುಳ್ಳು—ಎಂಬ ಹೇಳಿಕೆ ನಿಜವೆಂಬುದೇ ನಮ್ಮ ಮತ.

*　　　*　　　*　　　*

" ಮುಂದೆ, ನಮ್ಮ ದೇಶದಲ್ಲಿ ಸಿ. ವಿ. ರಾಮನ್, ವಿಶ್ವೇಶ್ವರಯ್ಯ ಮುಂತಾ ದವರು ಉದ್ಭವಿಸುವರು ಎಂಬ ಭರವಸೆ ನಮಗಿಲ್ಲ " (ಮದ್ರಾಸ್ ಪತ್ರಿಕೆ) ಕಾಲೇಜುಗಳಲ್ಲಿ ಸೀಟ್ ಸಿಗದಿದ್ದ ಮಾತ್ರಕ್ಕೆ ಅಂಥ ಮೇಧಾವಿಗಳು ಮುಂಬ ರುವುದಿಲ್ಲವೆಂದು ಹೇಳುವುದು ತಪ್ಪು

*　　　*　　　*　　　*

" ಸೆಕ್ರಟೇರಿಯಟ್‌ನಲ್ಲಿ ಹಗಲು ಹೊತ್ತಿನಲ್ಲೂ ಇಲೆಕ್ಟ್ರಿ ದೀಪವನ್ನುರಿಸಿ ಕೊಂಡು ಕೆಲಸಮಾಡುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು " (ಟೀಕೆ) ರುಜು ಹಾಕುವುದು ಯಾವ ಜಾಗದಲ್ಲಿ, ಎಂದು ಕತ್ತಲೇಲಿ ಹೇಗೆ ಗೊತ್ತಾಗುತ್ತದೆ?

*　　　*　　　*　　　*

ರೈಲ್ವೆ ಅನಾಹುತಗಳನ್ನು ತಪ್ಪಿಸಲು ನೇಮಿಸಲಾಗಿರುವ ಸಲಹೆಗಾರ ಸಮಿತಿಯವರು, ಯಾರೂ ಕಂಬಿ ಕೀಳದೆ ಇದ್ದರೆ, ಕೆಲಸ ಸುಸೂತ್ರ ಎಂದು ಶಿಫಾರ್ಸು ಮಾಡಿರುವರಂತೆ.

*　　　*　　　*　　　*

ಕೊರವನ ಸಿಂಹಾವಲೋಕನ

— o —

ಗರಿಗರಿಯಾದ ಗಾಂಧೀ ಟೋಪಿ, ಆಗತಾನೆ ಇಸ್ತ್ರಿ ಆಗಿದ್ದ ಗರಮಾಗರಂ ಖದ್ದರ್ ಜುಬ್ಬಾ, ರಾಜಾಜಿ ವಲ್ಲಿ, ಸರ್ದಾರ್ ಚಪ್ಪಲಿ, ಹಾಕಿಕೊಂಡು ಕ್ಲಬ್ಬಿಗೆ ಬಂದಿಳಿದ ಒಬ್ಬಾತ, ಇವನೇ ಕೊರವ ಎಂದು ಮನಸ್ಸಿಗೆ ಖಂಡಿತವಾಗಲು ನಮ್ಮ ನಮ್ಮ ತೊಡೆಗಳನ್ನು ನಾವೇ ಚುಗುಟಿಕೊಂಡೆವು. ಕಡೆಗೆ ನನ್ನ ಹಣೆ ವಿಭೂತಿಯುಕೂಡ 'ಅಡ್ಡಡ್ಡಲಾಗಿರಬೇಕಾದ್ದು ಪ್ರಶ್ನಾರ್ಥ ರೂಪಿಯಾಯ್ತು.

ಆಗ ಕೊರವ ಕುರ್ಚಿಗೆ ತ್ರಾಸು ಆಗದಂತೆ ಮೆಲ್ಲನೆ ಕುಳಿತ. ಕುರ್ಚಿಯ ಬೆನ್ನನ್ನು ಕೂಡ ಸೋಂಕಿರಲಿಲ್ಲ. ಬಟ್ಟೆ ಕೆಡದಿರಲೆಂದೋ ಏನೊ? ಸಿಪಾಯಿ ಕೂತ ಹಾಗೆ ಕೂತು ಹೇಳಿದ.

'ನಿಮಗೆಲ್ಲಾ ಆಶ್ಚರ್ಯ ಅಲ್ಲವೇ? ಗೂಟದಲ್ಲಿದ್ದಿದ್ದು ಕೈಗೆ ಸಿಕ್ಕಿದ್ದು ಮೈಗೆ ನೇತು ಹಾಕಿಕೊಳ್ಳುವ ನಾನು, ನನಗೇನು ಬಂತು ಇದೆಲ್ಲಾ ಅಂತ. ಈಗತಾನೇ ಆಹಾರ ಸರಬರಾಜು ಆಫೀಸಿಗೆ ಹೋಗಿ ಬಂದೆ ಅಲ್ಲಿ ಆಫೀಸರನ್ನು ಭೇಟಿ ಮಾಡಿ ಆಹಾರ ಹೆಚ್ಚು ಬೆಳೆಯಲು ನಾನು ಕೈಕೊಂಡ ಮಾರ್ಗಗಳನ್ನು ಹೇಳಿ ಬಂದೆ. ಬರುವಾಗ ನಮ್ಮನೆಗೆ ಬಂದಿದ್ದ ನನಗೆ ನೆರವಾದ ಅತಿಥಿಗಳ ವಿಷಯ ಹೇಳಿದೆ. ಹಾಗೂ ಜಯರಾಂದಾಸರವರು ರಾಜೀನಾಮೆ ಕೊಡುಕ್ಕೆ ಮುಂಚೆ ನಮ್ಮ ಮನೆಗೆ ಬಂದ ವಿಷಯ ಸೂಚಿಸಿ ನನ್ನ ರೇಷನ್‌ಕಾರ್ಡು ತೋರಿಸಿ, ಮೂರು ತಿಂಗಳಿಗೆ ಮೂರು ಜನರಿಗೆ ಅಂತ ಹೆಚ್ಚು ಬರೆಸಿಕೊಂಡು ಬಂದೆ. ಒಂದು ಟೋಪೀಗೆ, ಒಂದು ಜುಬ್ಬಕ್ಕೆ, ಒಂದು ವಲ್ಲಿಗೆ. ಇನ್ನೂ ಚಪ್ಪಲೀ ಭಾಗ ಬಂದಿಲ್ಲ' ಅಂದ.

'ಇಷ್ಟಕ್ಕೆಲ್ಲಾ ಅಷ್ಟು ಬಹಿರೂಪ ಬೇಕೆ? ಈ ಬಟ್ಟೆಗಾದ ಖರ್ಚಿನಲ್ಲಿ ಕಾಳ ಸಂತೆಯಲ್ಲೇ ವ್ಯಾಪಾರ ಮಾಡಬಹುದಾಗಿತ್ತಲ್ಲಾ' ಎಂದೆ.

ಅಷ್ಟಕ್ಕೇ ವಲ್ಲಿಯ ಮಡಕೆ ಸರಿಮಾಡುತ್ತಿದ್ದ ಕೊರವ ರೇಗಿ 'ಏನು ಅಲ್ಪ ಬುದ್ಧೀನೋ! ಈ ಬಟ್ಟೆ, ಬಹಿರೂಪ, ಮೂಲವ್ಯಯದಹಾಗೆ, ಕಲ್ಪತರುಹಾಗೆ, ರೇಷನ್ ಆಫೀಸಾಗಲೀ, ಶಾಲೆಯ ಅಡ್ಮಿಷನ್‌ಗಾಗಲೀ, ಪೆಟ್ರೋಲ್ ಕೂಪನ್‌ಗಾಗಲೀ, ಮೂರನೇ ಕ್ಲಾಸ್ ಟಿಕೆಟ್ ಕೊಂಡು ಎರಡನೇ ಕ್ಲಾಸಿನಲ್ಲಿ ಪ್ರಯಾಣ

ಬೆಳೆಸುಕ್ಕಾಗಲೀ, ಎಷ್ಟು ಅನುಕೂಲ! ಅದೆಲ್ಲ ಯೋಚನೆಯೇ ಬೇಡವೇ' ಎಂದು ಗುಟುರಿಸಿದ.

ಬೇಸ್ತು ತಿಂದವನಂತೆ ಸುಮ್ಮನಾದೆ.

* * * *

"ನಾನು ಹೇಳಲಿಲ್ಲವೇ! ಸರ್ದಾರರೇ ಸರಿ! ಈ ಯೋಚನೆಗೆಲ್ಲಾ ಆತನಿಗೊಬ್ಬನಿಗೇ ಈ ಚಾಣಾಕ್ಷ ವಿಷಯಗಳೆಲ್ಲಾ ತೋರೋದು" ಎಂದ ಕೊರವ ಉಪ್ಪೇರಿ ಚೂರನ್ನು ಬಾಯಿಗೆ ಹಾಕಿಕೊಳ್ಳುತ್ತಾ.

ಅರೆ! ಅಂತಹುದೇನು ಸರ್ದಾರರು ಮಾಡಿದ್ದು ಈಗ ಎಂದು ನಮಗೆಲ್ಲಾ ಅನುಮಾನ. ಕೊಚ್ಚಿನ್‌ಗೆ ಹೋಗಿ ಬಂದುದೇನು ಮಹತ್ವ! ಅರಣ್ಯ ಕಾಲೇಜಿನ ಭಾಷಣ ಅಂತಹ ಚಾಣಕ್ಯತನದ್ದೇ! ಎನ್ನಿಸಿತು.

ನಮ್ಮ ಅನುಮಾನ ಕೊರವನಿಗೆ ಕಾಣಿಸಿಯೇ ಇರಬೇಕು. ಆಗ ವಿಷದೀಕರಿಸಿದ.

'ನೋಡಿ! ಪೂರ್ವ ಬಂಗಾಲಾದಿಂದ ನಮ್ಮೂರಿಗೆ ಹಿಂದುಗಳು ಬರತೊಡಗಿದಾಗ, ಅವರುಗಳಿಗೆಲ್ಲಾ ಏನು ಹೇಳಿದರೆ ತಾನೆ ಏನು ಪ್ರಯೋಜನ. ಅದಕ್ಕೇ ನೋಡಿ! ಸರ್ದಾರರು ಉಪಾಯ ಹೂಡಿದ್ದು. ಮೆಲ್ಲಗೆ ಹೈದ್ರಾಬಾದಿನಿಂದ ಮೀರ್ ಲಾಯಕ್ ಆಲಿಯನ್ನು ಕರಾಚಿಗೆ ಸಾಗಿಸಿದರು. ತಪ್ಪಿಸಿಕೊಂಡ ಅಂತ ಆಟ ಹೂಡಿದರು. ಬೆಕ್ಕು ಬಿಟ್ಟುಹೋದ, ತಂಗಳು ಹಾಲು ಬಿಟ್ಟುಹೋದ, ಒಂದೆಮ್ಮೆ ಬಾಕಿ ಬಿಟ್ಟಿದ್ದ. ಎಂದೆಲ್ಲಾ ಮೋಜು ಆಡಿದರು. ಕರಾಚಿಗೆ ಹೋಗಿ ಲಾಯಕ್ ಆಲಿ ಇಲ್ಲಿನ ವಿದ್ಯಮಾನ, ಶಕ್ತಿ ಸಾಹಸ ಸಿದ್ಧತೆ ಎಲ್ಲಾ ಹೇಳಿದ ಅಲ್ಲಿನವರಿಗೆ. ಮಾರನೇ ವಾರವೇ ಲಿಯಾಕತ್ ಆಲಿ ಖಾನ್ ದೆಹಲಿಯಲ್ಲಿ ಸಿದ್ಧ.

ಹೆರ್ ಹೆಸ್‌ನ ಹಿಟ್ಲರು ಕಳಿಸಲಿಲ್ಲವೇ ಇಂಗ್ಲೆಂಡಿಗೆ—ಹಾಗೇ. ಆದರೆ ಅಲ್ಲಿ ಯೋಚನೆ ಸರಿಹೋಗಲಿಲ್ಲ ಇಲ್ಲಿ ಸರಿಹೋಯ್ತು. ಎಂದ ಕೊರವ.

ಎಂತಹ ಕುಹಕ ಮನಸ್ಸಯ್ಯಾ! ಬಿಲ್ಲಿಂದ ಹೊಡೆದರೂ ನೇರನೆ ಓಡುಲ್ಲ ಇವನ ಮನಸ್ಸು ಎನ್ನಿಸಿತು.

* * * *

'ರಾಜಕೀಯಾನೂ ಒಂದಾಟ ಮಾಡಿಟ್ಟರಲ್ಲ ನಮ್ಮವರು' ಎಂದ ಕೊರವ ಕಾಫಿ ಬಸಿದುಕೊಳ್ಳುತ್ತಾ.

ಈಗೇನು ಬಂತಯ್ಯಾ! ಎಂದೆ.

'ನೋಡು ನಮ್ಮ ರಾಷ್ಟ್ರೀಯ ಆಟ ಅಂದರೆ "ಕೊಕ್ಕಾಟ." ಇರೋದು ನಾಲ್ಕು ದೊಡ್ಡ ತಲೆ. ಅದರಲ್ಲಿ ಒಬ್ಬನಿಗೆ ಸರ್ತಿ ಪ್ರಕಾರ ಅಧ್ಯಕ್ಷ ಇನ್ನೊಬ್ಬ ಮಂತ್ರಿ, ಇನ್ನೊಬ್ಬ ಕೋಲುಗಾರ, ಮತ್ತೊಬ್ಬ ? ಹಿರಿಯ ಸಲಹೆಗಾರ. ಒಬ್ಬರಿಗೊಬ್ಬರು ಕೊಕ್ಕು ಕೊಡೋದು. ಅವನ ಸ್ಥಳ ಇವನು ಹೀಗೆ ರಾಜಕೀಯದಲ್ಲೂ ಕೊಕ್ಕಾಟ ತಂದರಲ್ಲಾ' ಎಂದ ಕೊರವ.

ಇವನ ಹಾಳು ಮಾತು ಯಾರಿಗೆ ಅರ್ಥವಾಗುತ್ತೆ ! ತಲೆನೋವು ಬರುತ್ತೆ ಅಲ್ಲವೇ ?

* * * *

'ಈ ಸಮಸ್ಯೆಗೆ ಸರಿಯಾಗಿ ಉತ್ತರ ಕೊಟ್ಟರೆ ನಿಮಗೆಲ್ಲಾ ತಿಂಡಿ, ಕಾಫಿ, ಸಿಗರೇಟ್ ಕೊಡಿಸ್ತೇನೆ' ಎಂದ ಕೊರವ.

ಕಲ್ಲಿನಲ್ಲಿ ಚಿನ್ನ ತೆಗೆದಿದ್ದು ನೋಡಿದ್ದೇವೆ. ಮಣ್ಣಿನಲ್ಲಿ ಮಾಣಿಕ್ಯ ಬಂದಿದ್ದು ನೋಡಿದ್ದೇವೆ. ಭಾರಿ ಮಿಾಶೆ ಮೇಲೆ ಕಣ್ಣೀರಿಳಿದಿದ್ದು ಕಂಡಿದ್ದೇವೆ. ಬಳೆ ತೊಟ್ಟ ಕೈ ಕುಸ್ತಿಮಾಡಿದ್ದು ಕಂಡಿದ್ದೇವೆ. ಆದರೆ ಕೊರವ ಇತರರಿಗೆ ತಿಂಡಿ, ಕಾಫಿ ಕೊಡಿಸೋದು, ಕೇಳಿದ್ದಿಲ್ಲ ಕಂಡಿದ್ದಿಲ್ಲ. ಅಂತಹ ಸಮಸ್ಯೆ ಯಾವುದು ? ಎಂಬ ಕುತೂಹಲ ಕೆರಳಿಸಿತು.

ಆಗಲಯ್ಯಾ ! ಅಂತ ಒಪ್ಪಿದೆವು.

'ನೋಡ್ರಪ್ಪಾ ! ನಮ್ಮನೆ ಎದುರಿಗೆ ಬೆಳಿಗ್ಗೆ ಏಳು ಗಂಟೆ ಹೊತ್ತಿಗೆ ಒಬ್ಬ ಕತ್ತಿ ಮಸೀತಾ ಹೋಗ್ತಿದ್ದ. ಅವನ ಹಿಂದೆ ಒಬ್ಬಾತ ಒಂದು ಕೆಂಪು ಅಲ್ವಾನು ಬಟ್ಟೆ ತೆಗೆದುಕೊಂಡು ಹೋಗ್ತಿದ್ದ. ಶಾಯಿಗಂಬಿ ಪಂಚೆ ಅಂತ ಇರ್ತಾ ಇತ್ತಿಲ್ಲವೇ ? ಅಂತಾದ್ದು. ಒಂದು ಅರ್ಧ ಗಂಟೆ ಹೊತ್ತಿಗೆ ಧ್ವನಿ ವರ್ಧಕ ಯಂತ್ರ ರಸ್ತೆ ತುದಿ ಮನೇಲಿ ಕಿರುಲುಕ್ಕೆ ಶುರುವಾಯ್ತು. ಮನೆ ಒಳಗೆ ಯಾರಾದರೂ ಅತ್ತರೆ ಕರೆದರೆ ಹೊರಗಿನವರಿಗೆ ಕೇಳಿಸದ ಹಾಗೆ ಗಟ್ಟಿಯಾಗಿ ಧ್ವನಿಯನ್ನೇ ವರ್ಧಿಸುತ್ತಾ, ಕೇಳಿದವರನ್ನೇ ವಧಿಸುತ್ತಿತ್ತು. ಸಾಯಂಕಾಲದ ತನಕ ಒಂದೇ ಸಮನೆ ಹೊಡೆದುಕೊಳ್ಳುತ್ತಿತ್ತು. ಹಾಡಿದ್ದನ್ನೇ ಹಾಡುತ್ತಿತ್ತು. ಕಾಡಿದವರನ್ನೇ ಕಾಡುತ್ತಿತ್ತು. ಪಿಜಾಮ ಹಾಕಿದ ಹತ್ತಾರು ಜನರು ರಸ್ತೇಲಿ ಸಾಯಂಕಾಲ ಓಡಾಡಿದರು.

'ಇದರ ಗುಟ್ಟು ಹೇಳಿ' ಅಂದ ಕೊರವ.

ಇಷ್ಟು ಸುಲಭದ ಸಮಸ್ಯೆಯೇ ? ಎಲ್ಲರೂ ಒಕ್ಕೊರಲಿಂದ ಹೇಳಿದೆವು. 'ಮುಂಜಿ' ಆಯಿತು ಆ ಮನೇಲಿ ಅಂತ.

ಒಂದು ನಿಮಿಷ ಕೊರವ ಸುಸ್ತು. ಕೂಡಲೇ ಚೇತರಿಸಿಕೊಂಡು ಕೇಳಿದ. ಎಂತಹವರ ಮನೆ ಮುಂಜಿ. ಅಂತ.

' ಅದೇನಯ್ಯಾ ! ಮಹಾ ಕತ್ತಿ ಮಸಿದಿದ್ದು. ಕೆಂಪು ವಸ್ತ್ರ. ಅಳು ಕೇಳಬಾರದು. ಈಗಿನ ಕಾಲದಲ್ಲಿ ಇದನ್ನು ಆಸ್ಪತ್ರೇಲಿ ಮಾಡುತ್ತಾರೆ. ಆದರೆ ಪೂರ್ವೀಕರು ಮನೆಯಲ್ಲಿ ಮುದುಕರ ಕೈಲಿ ನಡೆಸುತ್ತಾರೆ ' ಎಂದೆ.

' ಆಯ್ಯೋ ! ಪೆಚ್ಚುಗಳಾ ! ನಾನೂ ಹಾಗೇ ಅಂದುಕೊಂಡಿದ್ದೆ. ಇದು ಬಹುಷಃ ಆಸ್ಪತ್ರೆ ಮುಂಜಿ ಅಂತ. ಅದರೆ ದಿಟವಾಗಲೂ ಏನು ಗೊತ್ತೆ. ಶುದ್ಧ ಹದಿನಾರಾಣೆ ಬ್ರಾಹ್ಮಣರ ಮನೆ ಮುಂಜಿ. ಆ ಧ್ವನಿವರ್ಧಕ ಹಗಲು ಹನ್ನೆರಡು ಗಂಟೇನೂ ಊರಿಗೇ ಕೇಳಿಸೋ ಹಾಗೆ ಹೊಡೆದುಕೊಂಡಿದ್ದು ನೋಡಿದರೆ ಅನುಮಾನ ಅಲ್ಲವೇ ?

ಹೋಗಲಿ ಮುಂಜಿ ಅಂತ ಅರ್ಥ ಸರಿಯಾಗಿ ಊಹಿಸಿದಿರಿ ಅದ್ದರಿಂದ ತಿಂಡಿ ನಾನು ಕೊಡಿಸುತ್ತೇನೆ. ಕಾಫಿ ನೀವು ಕೊಡಿಸಿ ' ಎಂದ.

ತಿಂಡೀಗೆ ಎರಡಾಣೆ ಕಾಫೀಗೆ ನಾಲ್ಕಾಣೆ ನಮ್ಮ ಕ್ಲಬ್ಬಿನಲ್ಲಿ.

*　　　*　　　*　　　*

ಕ್ಲಬ್ಬಿನ ಹೊರಗಡೆ ಯಾರೋ ಕೂತಿದ್ದರು.

' ಕಣ್ಣಿಲ್ಲಾದ ಕರ್ಪೋತಿ ಶಿವಾ ' ಅಂತ.

' ಎಲ್ಲಾರ ಹೋಗಿ ನ್ಯಾಯಾಂಗ ರಚನೆ ಮಾಡು ಹೋಗೋ' ಎಂದು ಕೂಗಿದ ಕೊರವ, ಎಳೆನೀರು ಹೀರುತ್ತಾ.

*　　　*　　　*　　　*

ಕಾವೇರಿ ಮುಂತಾದ ನದಿಗಳಲ್ಲಿ ನೀರಿಂಗಿದ್ದರಿಂದ, ಕೃಷ್ಣರಾಜಸಾಗರ ಹಾಗಿರಲಿ, ಸಾಕ್ಷಾತ್ ಸಮುದ್ರದಲ್ಲೇ ನೀರಿನ ಮಟ್ಟ ಕಡಿಮೆ ಬಿದ್ದಿದೆ, ಎಂದು ತಜ್ಞರು ಅಭಿಪ್ರಾಯ ಪಟ್ಟಿದಾರೆ.

*　　　*　　　*　　　*

ಮಳೆ ಬರದೆ ಇರುವ ಪ್ರಯುಕ್ತ ಲಕ್ಷಾಂತರ ಜನರು ಹಾಹಾಕಾರ ಮಾಡುತ್ತಿದಾರೆ. (ಪತ್ರಿಕೆ)

ಹಾಹಾಕಾರಕ್ಕಿಂತ, ಕಣ್ಣೀರು ಬಿಡುವುದೇ ಸೂಕ್ತ.

*　　　*　　　*　　　*

ಸತ್ಯಶೋಧನೆ ಅಥವಾ ಸೈತಾನನ ಕುಣಿತ

—o—

ಕಾಲೇಜು ಬಿಟ್ಟಕೂಡಲೆ ಕೆಲಸ ಸಿಗುತ್ತೆಯೇ? ಕೆಲಸ ಹುಡುಕಿ ಸಾಧಿಸೋದಕ್ಕೆ ಏನಿಲ್ಲ ಅಂದರೂ ಮೂರು ನಾಲ್ಕು ವರ್ಷ ಆಗಬೇಕು. ಆ ನಾಲ್ಕು ವರ್ಷ ಅವರ ಆಯುಸ್ಸಿನಲ್ಲಿ ವ್ಯರ್ಥ ಆದಂತೆಯೇ ಅಲ್ಲವೇ? ಅದಕ್ಕಾಗಿ ಕೆಲಸಕ್ಕೆ ಸೇರಿದಾಗ ಆ ನಾಲ್ಕು ವರ್ಷಗಳನ್ನು, ವ್ಯರ್ಥ ಆದ ನಾಲ್ಕು ವರ್ಷಗಳನ್ನೂ, ಸಾಮಾನ್ಯವಾಗಿ ಜನರು ಮರೆತು, ಲೆಕ್ಕ ಸರಿಪಡಿಸಿ, ಜನ್ಮದಿನವನ್ನು ಕೊಡುತ್ತಾರೆ. ನ್ಯಾಯವೇ !

ಆದರೆ ಈ ಮರುವಿನಿಂದ ಒಂದು ಕಷ್ಟ ಬಂತು. ತಂದೆಗೆ ಲೆಕ್ಕದ ಪ್ರಕಾರ ಮೂವತ್ತು ವರ್ಷ. ಆಗಲೇ ಅವನ ಮಗ ಕೆಲಸಕ್ಕೆ ಸಿದ್ಧ. ಅವನ ವಯಸ್ಸು ಇಪ್ಪತ್ತೆರಡು. ಅಂದಮೇಲೆ ಎಂಟು ವರ್ಷಕ್ಕೇ ನಮ್ಮವನಿಗೆ ಗಂಡು ಹುಟ್ಟಿದರೆ, ಸ್ವಲ್ಪ ಅಮಾನುಷ ಅಲ್ಲವೇ ! ಇದೇನೂ ಅಸಾಧ್ಯ ಸುಳ್ಳು ಅನ್ನೊಲ್ಲ. ನಂಬೋದಕ್ಕೆ ಕಷ್ಟ ಅಂತ ಅಲ್ಲವೇ?

ಇಂತಹ ಪ್ರಸಂಗಗಳು ನಾವು ಜವಾನ ರಾಷ್ಟ್ರವಾಗಿದ್ದಾಗ ಆಗಿಹೋಯ್ತು. ಸ್ವತಂತ್ರ ಬಂತು. ಇನ್ನಾದರೂ ಅನುಮಾನಕ್ಕೆ ಎಡೆಕೊಡಬಾರದು ಅಂತ ಎಲ್ಲರಿಗೂ ಮನಸ್ಸು ಹೇಳಿತು. ನಿಮ್ಮ ಜನ್ಮ ದಿನವನ್ನು ದಿಟವಾದ್ದನ್ನು ನೀವು ಕಳಿಸಿ, ಇದರಿಂದ ಯಾವ ಕಷ್ಟವೂ ಒದಗುವುದಿಲ್ಲ ಅಂದರು.

ಇದೆಲ್ಲಾ ರಾಜೀವಪುರದಲ್ಲಿ. 'ಸತ್ಯಮೇವ ಜಯತೆ' ಎಂದು ಮೊಡಲುಗಳ ಮೇಲೆ ಕೆತ್ತಿಸುವ ಊರಲ್ಲಿ.

* * * *

ಆಗ ಶುರುವಾಯ್ತು ನೋಡಿ. ಕಾಲೇಜು ಬಿಡುತ್ತಿದ್ದಕೂಡಲೇ ಕೆಲಸಕ್ಕೆ ಸೇರಿದವರು ಚಪ್ಪರಿಸಿದರು. ನಾವು ಮೂರು ನಾಲ್ಕು ವರ್ಷ ಮರೆಯಲು ಆಗಲೇ ಇಲ್ಲ. ಈಗ ಸುಸಮಯ ಅಂದರು.

ಒಬ್ಬಾತ ತನ್ನ ಹಳೇ ಸ್ಕೂಲಿಗೆ ಹೋದ. ಅಲ್ಲೇ ಇದರ ಸುಳು ಸಿಗಬಹುದಾದ್ದು. ಏನೋ ಉಪಾಯ ಮಾಡಿ ಜಬರ್ದಸ್ತಿ ಮಾಡಿ, ಇನ್‌ಸ್ಪೆಕ್ಟರ್ ಅಂತ ಆ ಹಳೇ ರಿಜಿಸ್ಟರು ತರಿಸಿದ. ಒಂದು ಹಾಳೆ ಗೈರುವಲೆ ಆಯ್ತು. ನಾನು ಮೂರು ವರ್ಷ ಚಿಕ್ಕೋನು ಅಂತ ಮುತ್ತಜ್ಜಿ! ಸರ್ಟಿಫಿಕೇಟ್ ಕಳಿಸಿದ.

ಇನ್ನೊಬ್ಬಾತ ಒಂದು ಮುದ್ರಣಾಲಯಕ್ಕೆ ಹೋದ. ೧೯೧೮ರ ಚೈತ್ರ ಬಹುಳ ಸಪ್ತಮಿ ಆ ದಿನ ಶ್ರೀ .....ರಾಯರಿಗೆ ಸೌ||ಹ||ಕುಂ||ಶೋ||......ವ್ಮ ನನ್ನ ತಂದುಕೊಂಡು...... ಇಂತಹ ಕಡೆ ವಿವಾಹ ಮಹೋತ್ಸವ ಎಂದು ಹತ್ತು ಲಗ್ನ ಪತ್ರಿಕೆ ಅಚ್ಚೊತ್ತಿಸಿದ. ಒಂದನ್ನು ರಸಾಯನಿಕ ವಸ್ತುಗಳಿಂದ, ಹಳೆಯ ದನ್ನಾಗಿ ಮಾಡಿ, ಮೇಲಧಿಕಾರಿಗಳಿಗೆ ಕಳಿಸಿದ. ನಮ್ಮ ತಂದೆ ಮದುವೆ ಆ ದಿನ. ಮಿಕ್ಕಿದ್ದಕ್ಕೆಲ್ಲಾ ದಾಖಲಿಲ್ಲ. ನಾನು ಹುಟ್ಟಿದ್ದು ಒಂದೂವರೆ ವರ್ಷದ ಅನಂತರ ಅಂತ ಬರೆದ.

ಇದರ ಪ್ರಕಾರ ಅವನು ನಾಲ್ಕು ವರ್ಷ ಜೀವದಾನ ಪಡೆದ. ಅಷ್ಟು ಬೇಡವೇ ತಂದೆಗೆ ತಿರುಗಿ ಲಗ್ನಪತ್ರಿಕೆ ಅಚ್ಚೊತ್ತಿದ ಸಂಭ್ರಮದಲ್ಲಿ ಜೀವದಾನ ಮಗನಿಗೆ ಬೇಡವೇ ?

ಮತ್ತೊಬ್ಬಾತ ಬಲು ಶಹಣೆ. ಅವನ ಸ್ನೇಹಿತ ಈಗ ರೆಕಾರ್ಡ್ ಆಫೀಸಿ ನಲ್ಲಿರುವವ. ಮೆಲ್ಲಗೆ ಅವನ ಕೈ ಬೆಚ್ಚಗೆ ಮಾಡಿ ಆ ರಿಜಿಸ್ಟರನ್ನೇ ಅನಾಮತ್ತು ಬೇರೆ ಬರೆಸಿದ. ಬೇಕಾದ ಬದಲಾವಣೆಗಳನ್ನು ಅಲ್ಲಲ್ಲೇ ಮಾಡಿದ. ಹೆಚ್ಚು ಆಸೆ ಇಲ್ಲ ಅವನಿಗೆ. ಎರಡೇ ವರ್ಷ ಬೇಕಾಗಿತ್ತು ಮಗನ ವ್ಯಾಸಂಗ ಮುಗಿಯಲು ಅಷ್ಟಕ್ಕೆ ಲೆಕ್ಕ ಹಾಕಿ ಉತ್ತರ ಸರಿಬರುವಂತೆ ಮಾಡಿದ.

*   *   *   *

ಆಳಧಿಕಾರಿಗಳಿಗೆ ಬೇಜಾರಾಯ್ತು. ಎಲಾ ! ಎಲಾ ! ಒಂದು ಸತ್ಯದ ಶೋಧನೆ ಮಾಡೋಣ ಅಂದರೆ, ಸೈತಾನನೇ ಎದ್ದು ಎದ್ದು ನಿಲ್ಲುತ್ತಾನಲ್ಲ. ಇಂತಹ ಸಂದರ್ಭದಲ್ಲಿ ಮಹಾತ್ಮ ಗಾಂಧಿ ಏನು ಮಾಡುತ್ತಿದ್ದರು? ಎಂದು ಯೋಚಿಸಿದರು. ಸರಿ ! ಉಪವಾಸ !! ಅದೇ ತಕ್ಕ ಪ್ರಾಯಶ್ಚಿತ್ತ.

ಸರಿ ಉಪವಾಸ ಹಾಕಿದರು ಎಲ್ಲರನ್ನೂ, ಆದರೆ ರಾಜಕೀಯದಲ್ಲಿ ಹಾಗೆ ಹೇಳೊಕ್ಕೆ ಆಗುತ್ತದೆಯೇ? ಕಂಡದ್ದನ್ನು ಕಂಡಹಾಗೆ ಹೇಳಿ ಕೆಂಡ ಸುರಿಸಿ ಕೊಳ್ಳೋದೆ ?— ವಾರಕ್ಕೊಮ್ಮೆ ಏಕಾದಶಿ ಎಂದರು ಕಾನೂನು ಪ್ರಕಾರ. ಸಾಗರ ಬತ್ತಿಹೋದರೆ ಆಕಾಶ ಬಿದ್ದು ಹೋದರೆ ನಾವೇನು ಮಾಡಲಾಗುತ್ತದೆ ಎಂದು ಸಬೂಬು ಹೇಳಿದರು.

ಆದರೂ ಸತ್ಯಶೋಧನೆ ಸಾಂಗವಾಗಿಲ್ಲ. ಪೂರ್ಣ ಆದ ಮೇಲೆ ರಾ. ಪುರದ ವರದಿಗಾರರು ವರದಿ ಕಳಿಸೇ ಕಳಿಸುತ್ತಾರೆ. ಆಗ ನಿಮಗೆಲ್ಲಾ ವಿಶದೀ ಕರಿಸುತ್ತೇವೆ.

" ನ. ಸ್ವಂ. ಬಾತ್ಮೀದಾರ."

ಸದ್ಯ ! ಬದುಕಿದೆನಪ್ಪಾ !

— o —

ಸದ್ಯ ! ಈ ಕಾಂಗ್ರೇಸಿನವರು ಅಧಿಕಾರಕ್ಕೆ ಬಂದರಪ್ಪಾ ! ಬದುಕಿದೆ.

ನೋಡಿ ! ನಾನು ಇಪ್ಪತ್ತೈದು ವರ್ಷಗಳ ಹಿಂದೆ ವ್ಯಾಪಾರಕ್ಕೆ ಬೊಂಬಾಯಿನಲ್ಲಿ ಶುರು ಮಾಡಿದೆ. ಆಗ ಆಳಧಿಕಾರಿಗಳು ಆಂಗ್ಲೇಯರು. ಸರಿ ! ಸೂಟು ಬೂಟು ಹ್ಯಾಟು. ಇಲ್ಲದಿದ್ದರೆ ಸಾಮಾನು ತರಿಸುಕ್ಕಾಗೋದೇ? ಸುಂಕ ತಪ್ಪಿಸಿಕೊಳ್ಳೋಕೆ ಆಗೋದೆ. ಹ್ಯಾಟು ಹಾಕಿಕೊಂಡೆ ಮಿಕ್ಕ ಕೆಲಸ. ಆದರೆ ಒಂದಿಲ್ಲ ಒಂದು ದಿನ ಹಾಳು ಬೊಂಬಾಯಿ ಗಾಳಿ ಹ್ಯಾಟನ್ನೂ ಹಾರಿಸಿ ಕೊಂಡು ಹೋಗೋದು ಒಂದು ದಿನ ಮೋಟಾರ್ ಕೆಳಗೆ ಹ್ಯಾಟು ಸಿಕ್ಕೋದು. ಇನ್ನೊಂದು ದಿನ ಗಾಡಿಕೆಳಗೆ. ಟ್ರಾಂ ಕೂಡ ಆಹುತಿ ತೊಗೊಂಡಿತ್ತು. ಹೀಗಾಗಿ ಹ್ಯಾಟಿನ ಖರ್ಚೇ ವರ್ಷಕ್ಕೆ ಇನ್ನೂರು.

ಆ ಹೊತ್ತಿಗೆ 'ಸ್ವಾತಂತ್ರ್ಯ ಚಳುವಳಿ' ಬಂತು. ಸರ್ ಆರ್ಕಾಟರು ರುಮಾಲು ಹಾಕಿಕೊಂಡೇ ಆ ಕಡೆ ಜಗದ್ಭೇರಿ ಹೊಡೆದರು. ಸರ್ ಸಿ. ಪಿ. ರುಮಾಲು ಹಾಕಿಯೇ ಉಳಿದವರಿಗೆ ಟೋಪಿ ಹಾಕಿದರು. ರೈಟ್ ಆನರಬಲ್ ಶಾಸ್ತ್ರಿಯವರು ರುಮಾಲು ಹಾಕಿಯೇ ಮಂತ್ರಮುಗ್ಧರನ್ನಾಗಿಸಿದರು ಕೇಳಿ ದವರನ್ನು.

ನಾನೂ ಮೈಸೂರು ರುಮಾಲನ್ನು ಹಾಕಿದೆ. ಜರಿ ರುಮಾಲು ಲಕ್ಷಣವಾಗಿ ಕಟ್ಟಿದೆ. ವ್ಯಾಪಾರವೇನೋ ಇದರಿಂದ ಕುದುರಿತು. ಹತ್ತು ರೂಪಾಯಿ ವರ ಮಾನ ತೆರಿಗೆ ನೌಕರನಿಗೆ ಕೊಡುವ ಕಡೆ, ಸಾವಿರ ಕೊಡುವಂತಾದೆ. ದಿಟ. ಆದರೂ ರುಮಾಲು ಖರ್ಚು ಮಿತಿಮೀರಿತು. ಎಷ್ಟು ಬಿಗಿಯಾಗಿ ಕಟ್ಟಿಸಿದರೂ ಆ ರುಮಾಲು ಗಾಳಿ ಬಂದರೆ ಹಾರಿಹೋಗುತ್ತಿತ್ತು. ನನಗೇನೋ ಪುರುಚುಲು ಕೂದಲು. ಎಷ್ಟು ತೀಡಿದರೂ ಪುರುಚಲು ಪುರುಚಲೇ. ಬೆಳಿಗ್ಗೆ ನೇರಗಿದ್ದಿದ್ದು ರಸ್ತೇಗೆ ಹೋಗೋಹೊತ್ತಿಗೆ ಪುರುಚಲಾಗಿ ರುಮಾಲನ್ನೆತ್ತುತ್ತಿತ್ತು. ಗಾಳಿ ಬಂದು ಅದನ್ನು ಹಾರಿಸುತ್ತಿತ್ತು. ಮೋಟಾರು ಬಂದು ಮರ್ದನಮಾಡುತ್ತಿತ್ತು. ವರ್ಷಕ್ಕೆ ರುಮಾಲಿನ ಖರ್ಚೇ ನಾನ್ನೂರು. ಇನ್ನೂರು ರುಮಾಲಿನ ಬೆಲೆ. ಇನ್ನೂರು ಡೋಬಿಯ ಬಿಲ್ಲು. ಆಯ್ಯೋ ! ಅನ್ನಿಸುತ್ತಿತ್ತು. ಎಷ್ಟೇ ದುಡ್ಡು ಕೈಗೆ ಬಂದರೂನೂ—ಕೈ ಬಿಟ್ಟು ಮೂರು ಕಾಸು ಹೋದರೆ ಕರುಳೇ ಹರಿ ದಂತಾಗುತ್ತಲ್ಲವೇ ? ಅಯ್ಯಯ್ಯೋ ! ಎನ್ನಿಸುತ್ತಿತ್ತು.

ಸದ್ಯ ! ಕಾಂಗ್ರೆಸ್ ಅಧಿಕಾರಕ್ಕೆ ಬಂತು ಈಗ ಮೂರೂವರೆ ಆಣೆ ಟೋಪಿ. ಹ್ಯಾಗೆ ಹ್ಯಾಗೆ ಕೂದಲು ಬೆಳೀಲಿ ಟೋಪಿವಾರೆಯಾಗುತ್ತೆಯೇ ವಿನಹಾ ಬಿದ್ದು ಹೋಗೊಲ್ಲ. ಬಿದ್ದರೂ ಇದ್ದಲ್ಲೇ ಇರುತ್ತೆಯೇ ಹೊರತು ಹಾರಿಹೋಗಿ ಮೋಟಾರುಗಾಡಿ ಕೆಳಗೆ ಆತ್ಮಹತ್ಯ ಮಾಡಿಕೊಳ್ಳೊಲ್ಲ. ತೆಗೆದು ಜೇಬಿಗಿಡೋದು. ಮುಕ್ಕಾಲಾಣೆ ಡೋಬೀಗೆ ಕೊಟ್ಟರೆ ತಿರುಗಿ ಹೊಸ ಟೋಪಿ.

ಹ್ಯಾಟಿನ ಕಾಲದಲ್ಲಿ ಹ್ಯಾಟು, ರುಮಾಲು ಕಾಲದಲ್ಲಿ ರುಮಾಲು ಈಗ ಈ ಟೋಪಿ, ಎಲ್ಲವೂ ಒಂದೇ ಶಕ್ತಿಯುಳ್ಳದ್ದು.


ಆದರೂ ಆಗಿಂದಾಗ್ಗ್ಯೆ ಮುಕ್ಕಾಲಾಣೆ ಖರ್ಚು ಮಾಡಬೇಕಲ್ಲ ಅನ್ನಿಸುತ್ತೆ.

ಈ ಸುತ್ತಿಗೆ ಕುಡುಗೋಲು ರಾಜ್ಯದಲ್ಲಿ ತಲೆಗೆ ಏನೂ ಹಾಕೋದೇ ಇಲ್ಲ ಅಂತ ಕೇಳಿದ್ದೆ. ಅಂತಹ ರಾಜ್ಯ ಬಂದರೆ ಟೋಪಿ ಖರ್ಚೂ ಮಿಗುತ್ತೇನೋ ಅನ್ನಿಸುತ್ತೆ. ಆದರೆ—ಆದರೆ ವ್ಯಾಪಾರಕ್ಕೇ ಕಲ್ಲು ಬೀಳುತ್ತೇನೋ ? ಬರೀ ತಲೇಗೆ ಅಷ್ಟೇ ಸಂಪಾದನೆ ಆಗಿ ಬಿಟ್ಟರೆ ?

ಏನಾದರೂ ಮಾಡಿ ಈ ಟೋಪೀನ ಉಳಿಸಲೇಬೇಕು—ನಾನು ಬದುಕ ಬೇಕಾದರೆ ಅನ್ನಿಸುತ್ತೆ.

ಸದ್ಯ ! ಈಗ ನಾನು ಬದುಕಿದೆನಪ್ಪಾ ! ಮುಂದಕ್ಕೆ ಏನಾದರೂ ಆಗಲಿ !

'ಟೋಪೀವಾಲಾ'



ಕೆರೆ ಗಾದೆಗಳು

—— o ——

ಕೆರೆ ಬತ್ತಿಹೋದಮೇಲೆ
ಸಂಬಳ ಹಿಡಿದುಕೊಂಡರಂತೆ

* * *

ಹೊಳೆ ತುಂಬಿದ ಮೇಲೆ,
ಅಂದವರ ಮಿಂಡ.

* * *

ನೀರು ನೀರೇ ಒಂದಾಗಿ ಹೋಯ್ತು
ನೀರು ತಡೆದ ಕಟ್ಟೆಯೇ ಒಂದಾಯ್ತು

* * *

ಮೊದಲಿದ್ದ ನಾಲೇನೇ ವಾಸಿ
ತಳವಾದರೂ ತೋಯ್ದಿರುತ್ತೆ

* * *

ಬರ್ತೀನಿ ಬರ್ತೀನಿ ಅಂತಂತೆ ಮಳೆ
ಆಲೆ ಮನೆ ದೆವ್ವದಹಾಗೆ

* * *

ಭರಣಿ ಮಳೆಗೆ ಕರುಣೆ ಇಲ್ಲ
ಕೃತ್ತಿಗೆ ಮಳೇಗೆ ವೃತ್ತಿಗೆ ತೊಯ್ಯಲಿಲ್ಲ

* * *

ಕೆರೆ ನೀರಿಗೆ ಡೊಣ್ಣೆನಾಯಕನ ಅಪ್ಪಣೆಯೇ

* * *

ಸಾವಿರ ರೂಪಾಯಿ ಸಂಬಳಗಾರ
ಕೆರೆ ಬತ್ತಾಗ ಕಾಸದಾರ

* * *

★



ಆಳು ನೋಡಿ ಬೆಲೆ !

ಉದಯ ವಾಯಿತು

ಕನ್ನಡಮ್ಮನ ಭಾಗ್ಯವನ್ನು ಏನೆಂದು ಹೇಳಲಿ ? ಎಷ್ಟೆಂದು ಹೊಗಳಲಿ ? ಯಾರಮುಂದೆ ನುತಿಸಿ ಪಾಡಲಿ ? ಯಾವ ವೇದಿಕೆಯ ಮೇಲೆ ನಿಂತು ನಲಿದು ಎಂಥ ಸಭೆಯನ್ನು ಹೇಗೆ ಕುಣಿಸಲಿ ? ನನಗೊಂದೂ ತೋಚದಾಗಿದೆ; ನನಗೇನೂ ಕಾಣದಾಗಿದೆ. ಆದರೂ, ವಿಧಿಯಿಲ್ಲ. ಹಾಡಿ ಹೊಗಳಿ ನುತಿಸಲೇ ಬೇಕು.

ನಿನ್ನೆ ನನಗೊಬ್ಬ ಮಹಾ ಕವಿಯ ಪರಿಚಯವಾಯಿತು ; ನಿನ್ನೆ ನಾನು ಕನ್ನಡದ ನವ ಅರುಣೋದಯವನ್ನು ಸ್ವಾಗತಿಸಿದೆ. ತೆರದ ಮನದಿಂದ ಪುಳಕಿತ ದೇಹದಿಂದ, ಪಲ್ಲವಿಸಿದ ಹೃದಯದಿಂದ, ಸೆಟೆದು ನಿಂತ ಕಿವಿಗಳಿಂದ, ಆತನ ಕವನಗಳನ್ನು ಕೇಳಿ ಜನ್ಮ ಸಾರ್ಥಕ ಮಾಡಿಕೊಂಡೆ. ಆಹಾ ! ಆತನ ದಾರಿ ಎಂಥ ಕಡಿದು, ಆತನ ಶೈಲಿ ಎಷ್ಟು ನವೀನ ! ಆತನ ಉಪಮೆಗಳು ಹೇಗೆ ಎದೆಯನ್ನು ಚುಚ್ಚಿ ಮೆಚ್ಚಿಗೆ ಪಡೆಯುತ್ತವೆ.

ಆತ ಅಜ್ಞಾತ ಕವಿ, ಇವತ್ತು ಬಡವ. ಇವತ್ತು ಬರೀ ಬಸ್ ಕಂಡಕ್ಟರ್, ಈಗ ಆದರೆ, ನಾಳೆ ? ನಾಳದ್ದು ? ಮುಂದಿನ ಚುನಾವಣೆ— ಅದೆಂದು ನಡೆಯುವುದೋ, ಯಾರು ಬಲ್ಲರು—ಮುಂದಿನ ಚುನಾವಣೆಯಾಗಿ ಕರ್ನಾಟಕದ ಇಪ್ಪತ್ತೊಂದು ವಯಸ್ಸು ಮೀರಿದ ಜನಸ್ತೋಮದ ಪ್ರತಿನಿಧಿಗಳ ಕೈಗೆ ರಾಜ್ಯಸೂತ್ರ ಬಂದಮೇಲೆ ?....ಅದನ್ನು ಯೋಚಿಸಿದಾಗಲೇ, ಕುಣಿದಾಡುವುದೆನ್ನೆದೆ; ನಲಿದಾಡುವುದೆನ್ನೆದೆ.


ಪ್ರಗತಿ ಎಂದರೆ, ಆತನ ಪ್ರಾಸ. ಅಶ್ಲೀಲ ಎಂದರೆ ಆತನ ನೀರಸ ಮಧುರ ಸುಲಲಿತ ಸಂಸಾರ ಬಾಹಿರ ಜೀವನ ಚಿತ್ರ. ಪ್ರಕೃತಿ ಎಂದರೆ ಆತನ ನಿಸರ್ಗ ನಿರ್ಮಲ ನಿಸ್ಪನ. ಇವತ್ತು ಆತ ಬಸ್ ಟಿಕೀಟುಗಳ ಹಿಂಭಾಗದಲ್ಲೇ ತನ್ನ ಮುಕ್ತಗಳನ್ನು .ಬರೆದು ಪುಸ್ತಕವಾಗಿರಿಸುತ್ತಿರಬಹುದು. ಆದರೆ, ನಾಳೆ ? ನಾಳದ್ದು ? ಚುನಾವಣೆ ಮುಗಿದು, ಬಡ ಬೋರೇಗೌಡನೇ ಕನ್ನಡದ ಹಣೆ ಬರಹವನ್ನು ಒರೆಸಿ ಮೆರೆಸುವಾಗ, ಆತ ಮೇಲೇರಲಾರನೆ ? ಮೆರವಣಿಗೆಯಲ್ಲಿ ಮಿರು ಮಿರುಗಲಾರನೆ ? ನಾ ಬಲ್ಲೆ; ಏರುವ; ಮಿರು ಮಿರುಗುವ, ಖಂಡಿತ ಆ ಕಾಲ ಬರುತ್ತೆ ; ನಾನೂ ನೀವೂ ಆಗ ಈ ಮಣ್ಣಿನೊಳಗೆ ಮಣ್ಣಾಗಿ ಬೆರೆತಿರಬಹುದು. ಆದರೆ, ಆತ ಮಾತ್ರ ಪಠ್ಯಪುಸ್ತಕಗಳಲ್ಲಿ, ಬಸ್ ಪ್ರಯಾಣಿಕರ


ಬಾಯಲ್ಲಿ, ಕಿಸಾನರ ಕೂಗಲ್ಲಿ, ಉಮೇದುವಾರರ ಉರುಟಣಿಗೆಯಲ್ಲಿ, ಮೆರೆವ! ಇದು ಸಿದ್ಧ ಬರೆದಿಟ್ಟುಕೊಳ್ಳಿ.

ನಿನ್ನೆ ಆತ ನನಗೆ ಓದಿ ತೋರಿಸಿದ: 'ಸುಣ್ಣನೆ ಕಾಡಿಪ ಶಿಶುಗಡಣ—' ಇವೊಂದು ಪಂಕ್ತಿ? ಉಳಿದವನ್ನು ಇನ್ನೂ ಬರೆದಿಲ್ಲ ಸರಿ ಆದರೂ, ಇದೊಂದೇ ಸಾಲದೆ. ಒಂದು ಅಗಳನ್ನು ಹಿಸುಕಿದರೆ, ಬೆಂದ ಪರಿ ತಿಳಿಯದೆ? 'ಮೇಗಡೆ ಕೆಳಗಡೆ ಧೂಳೋ ಧೂಳು,' ಮತ್ತೊಂದು ಪಂಕ್ತಿ! ಆಹಾ ಎಂಥ ಚಿತ್ರ, ಭಾಂಡವಾಳಶಾಹಿತತ್ವಕ್ಕೆ ಎಂಥ ಭಯಂಕರ, ಕ್ರಾಂತಿಕಾರಕ ಟೀಕೆ! 'ಸೂಳೆ ನಿನ್ನನು ಹಾಳೆಂಬರೆ?'—ಏನು ಕನಿಕರ, ಎಷ್ಟು ವಿಶಾಲವಾದ ಹೃದಯ! 'ನೊರೆಯು ತೊರೆಯು ಮೊರೆಯು ಕೊರೆದು'.. ಆ ಕರ-ಕರ ಶಬ್ದವನ್ನು ಲಾಲಿಸಿ, ಅದಕ್ಕೆ ತಲೆ ತೂಗಿ, 'ಕಪ್ಪೆಗೆ ಲಜ್ಜೆಯೇ ಇಲ್ಲವೆ ಕೊಳದೊಳು?' ಎಂಬ ಆತನ ಪ್ರಶ್ನೆಗೆ ಕಪ್ಪೆಯೇ ಉತ್ತರ ಕೊಡಬೇಕೆ ಹೊರತು, ಐನ್‌ಸ್ಟಿನ್ ರಾಮನ್ ಇಂಥ ಪ್ರತಿಭಾವಂತರಿಂದಾಗುತ್ತದೆಯೆ?' 'ಅಳಿಲನು ಸವರಿದ ರಾಮನ ಬೆರಳು'—ಭಕ್ತಿ ಚಿಮ್ಮುವ ಚಿಲುಮೆ, ರಾಮನ ಕೂಡ ನಮಗೂ ಅದನ್ನು ಸವರ ಬೇಕೆಂದೆನಿಸುವುದಿಲ್ಲವೆ? "ಹೋಲ್ಡಾನ್ ಹೋಲ್ಡಾನ್ ಮಂತ್ರವ ಜಪಿಸಿ, ಕಟಕಟ ತಿರುಗಿಸಿ ಎಂಜಿನ ಕೋಲಿಸಿ" ನಿತ್ಯಜೀವನಕ್ಕೆಷ್ಟು ನಿಕಟ ಸಂಬಂಧ! 'ಕೋಲಿಸಿ'?....! ವ್ಹೈ ಜುಂ ಎನುತ್ತಿದೆ. ಲೋಕದಿ ತಾನಾಗಿಯೇ 'ನಿಲ್ಲು ತ್ತಿದೆ. ಕವಿಗೆ ಕಾವ್ಯದ ಹುಚ್ಚು ಹಿಡಿದಾಗ, ವಿಮರ್ಶಕ ಪೆಚ್ಚಾಗುವನು.

ಕನ್ನಡಮ್ಮನ ಭಾಗ್ಯವೇ ಭಾಗ್ಯ! ಉದಯವಾಯಿತು ಚೆಲುವ ಕನ್ನಡ ನಾಡು.

ರೇವಣ್ಣ.





ಪ್ರಗತಿಪರ ಕಲೆ

ಅಥವಾ

ಮೊದಲ ಬಹುಮಾನ ಬಂದ ಟಗೆ.

ದೇವತೆಗಳಿಗೆ ಮೋಕ್ಷ

ಉತ್ತರ ಪ್ರದೇಶದ ಆಹಾರೋತ್ಪತ್ತಿ ಕಾರ್ಯಕ್ರಮಕ್ಕೆ ಅಡ್ಡಿ ತಂದು, ವಿಪರೀತ ಹಾವಳಿ ಮಾಡುತ್ತಿದ್ದ ಕೋತಿಗಳನ್ನು ಅಲ್ಲಿಯ ಸರ್ಕಾರ ಹಿಡಿದು ಕೊಲ್ಲಿಸುತ್ತಿರುವುದಷ್ಟೆ. ಇದುವರೆಗೂ ೨೬ ಸಾವಿರ ಕಪಿಗಳನ್ನು ಕೊಂದಿರುವುದಾಗಿಯೂ, ಕೊಂದು ತರುವವರು ಅದಕ್ಕಾಗಿ ಕೊಡಲಾಗುತ್ತಿರುವ ಬಹುಮಾನ ಪಡೆಯಲು ಮ್ಯಾಜಿಸ್ಟ್ರೇಟರುಗಳ ಕಚೇರಿಗಳಿಗೆ ಅವುಗಳ ಲಾಂಗೂಲಗಳನ್ನು ತರಬೇಕೆಂದೂ ಸದರಿ ಬಾಲಗಳನ್ನು ಕೋರ್ಟಿನ ಅಂಗಳದಲ್ಲೇ ಸುಡುತ್ತಿರಲಾಗಿದೆಯೆಂದೂ ವರದಿಯಾಗಿದೆ.

ಈ ಸುದ್ದಿಯಿಂದ ಹಲವರು ತಳಮಳಿಸಿ ಹೋಗಿದಾರೆ. ಒಬ್ಬಿಬ್ಬರು ಬೃಹನ್ನಾರದೀಯ ಪುರಾಣದಿಂದ ಶ್ಲೋಕಗಳನ್ನುದ್ಧರಿಸಿ, ಶ್ರೀರಾಮಚಂದ್ರನು ಕಪಿಗಳು ತನ್ನವರೆಂದೂ ಅವುಗಳನ್ನು ಯಾರೂ ಹಿಂಸಿಸಕೂಡದೆಂದೂ, ವೃಕ್ಷಾದಿಗಳ ಫಲಗಳೆಲ್ಲವನ್ನೂ ಅವು ಯಥೇಚ್ಛವಾಗಿ ತಿನ್ನಬಹುದೆಂದೂ, ಹಾಗೆ ತಿಂದಿದ್ದೆಯಾದರೆ, ಸರೋವರಗಳಲ್ಲಿ ಶೀತಲವಾದ ಜಲವಿರುತ್ತದೆ ಎಂದೂ, ಈಚೆಗೆ ಕನ್ನಂಬಾಡಿ ಕೆರೆ ಬತ್ತಿದ್ದಕ್ಕೆ ಕಾರಣ ಉತ್ತರ ಪ್ರದೇಶದ ಈ ವಾನರ ವಧೆ ಎಂದೂ, ಪ್ರಸ್ತಾಪ ಮಾಡಿದಾರೆ.

ಆದರೆ, ಎಲ್ಲ ಪುರಾಣಗಳಲ್ಲೂ ಈ ಕಥೆ ಕಂಡುಬರುವುದಿಲ್ಲ. ಶ್ರೀರಾಮಚಂದ್ರನು ತನ್ನ ಪಟ್ಟಾಭಿಷೇಕದ ಅನಂತರ ಕಪಿಸೇನೆಯನ್ನು ಬೀಳ್ಕೊಟ್ಟಾಗ ಹೇಳಿದ ಮಾತುಗಳು ಒಂದೊಂದು ಪುರಾಣದಲ್ಲಿ ಒಂದೊಂದು ಬಗೆಯಾಗಿ ಉಕ್ತವಾಗಿದೆ. ಅಶ್ವಮೇಧ ಮಾಡಿದಾಗ, ಕುದುರೆಯ ಸಂಗಡ ಕಪಿಗಳನ್ನು ತೆಗೆದುಕೊಂಡು ಹೋಗಿಲ್ಲವೆಂದೂ, ನರರಿಂದಲೇ ಆ ಕೆಲಸ ನೆರವೇರಿಸಿದನೆಂದೂ ರಾಮರಾಜ್ಯ ಮುಂತಾದ ಚಲನಚಿತ್ರಗಳಿಂದಲೂ ವ್ಯಕ್ತವಾಗುತ್ತದೆ.

ಅಲ್ಲದೆ, ಶುಂಡಕ ಪುರಾಣದಲ್ಲಿ ಲಿಖಿತವಾಗಿರುವ ಶ್ರೀರಾಮಚಂದ್ರನ ಆಶೀರ್ವಚನಗಳನ್ನೂ ನಾವು ಗಣನೆಗೆ ತಂದುಕೊಳ್ಳಬೇಕಾಗಿದೆ. ಮಣಿಕರ್ಣಿಕಾ ಮುದ್ರಣಾಲಯದಿಂದ ಪ್ರಕಟಿತವಾಗಿರುವ ಈ ಮಹಾ ಪುರಾಣದ ೪೮ನೆಯ ಅಧ್ಯಾಯದ ಅಂತ್ಯದಲ್ಲಿ, ಶ್ರೀರಾಮಚಂದ್ರಮೂರ್ತಿ ತನ್ನ ಪಟ್ಟಾಭಿಷೇಕದ

ಮರುದಿನ ಅಯೋಧ್ಯೆಯ ನಂದನೋದ್ಯಾನದಲ್ಲಿ ಕಪಿಸಮೂಹವನ್ನು ಉದ್ದೇಶಿಸಿ ಈ ರೀತಿ ಹೇಳಿದನಂತೆ "ಎಲೈ ದೇವತೆಗಳಿರಾ! ದುಷ್ಟ ಶಿಕ್ಷಣ ಶಿಷ್ಟರಕ್ಷಣ ಕಾರ್ಯಕ್ಕಾಗಿ ನಾವು ಮಾನವೋದರಲ್ಲಿ ಜನಿಸಿ, ನರಲೀಲೆಯನ್ನು ತೋರಿ. ನಿಮ್ಮ ಮಹದುದ್ದೇಶವನ್ನು ಪೂರ್ಣಗೊಳಿಸಿದ್ದಾಯಿತು." ಆಗ ದೇವತೆಗಳೆಲ್ಲರೂ ಏಕ ಕಂಠದಿಂದ ರಾಮ ಸ್ತೋತ್ರವಂಗೈದು, ತಮಗೆ ಮತ್ತೆ ದೇವತಾ ಸ್ವರೂಪವನ್ನು ಅನುಗ್ರಹಿಸಬೇಕೆಂದೂ ಮೇಲು ಲೋಕಕ್ಕೆ ಗಗನಮಾರ್ಗವಾಗಿ ಹೊರಡಲು ಅನುಜ್ಞೆ ಕೊಡಬೇಕೆಂದೂ ಪ್ರಾರ್ಥಿಸಿಕೊಂಡರಂತೆ. ಆದರೆ, ಶ್ರೀರಾಮಚಂದ್ರ ಮೂರ್ತಿ, "ಎಲೈ ದೇವತೆಗಳಿರಾ! ನನ್ನ ಅವತಾರ ಕಾರ್ಯದಲ್ಲಿ ನೆರವಾಗಲು ನೀವು ದೇವಲೋಕದಿಂದ ಭೂಲೋಕಕ್ಕೆ ಇಳಿದು ಬಂದಿರೆಂದು ತಿಳಿಯಬೇಡಿ; ಅದು ಅಹಂಕಾರದ ಮಾತು; ಅಸಹಾಯ ಶೂರನಾದ ಅಂತರ್ಯಾಮಿಗೆ ದೇವತೆಗಳ ಬೆಂಬಲ ಬೇಕಿಲ್ಲ. ಆದರೆ, ಹೇಳುತ್ತೇನೆ ಕೇಳಿ; ನಿಮ್ಮ ಭೋಗಾಭಿಲಾಷೆಗೂ, ಸುರಾಪಾನಕ್ಕೂ, ಅಲಂಕಾರ ಕಾಮತೆಗೂ, ನರ್ತನ ಪಿಪಾಸೆಗೂ ಹೇಸಿ, ಬ್ರಹ್ಮದೇವನು ನಿಮ್ಮನ್ನು ಹಿಂದೊಮ್ಮೆ ಶಪಿಸಿದ್ದರಿಂದ, ನೀವು ಈ ವಿಕಾರ ರೂಪವನ್ನು ತಾಳಿ ವೃಕ್ಷವಾಸಿಗಳಾಗಿ, ಬಾಲಹೊತ್ತು ಫಲ ಮೂಲಗಳನ್ನು ಭುಜಿಸಿ ಬದುಕುತ್ತಿರುವಿರಿ" ಎಂದನಂತೆ ಆಗ, ಕಪಿಗಳೆಲ್ಲವೂ ನಾಚಿ ತಲೆತಗ್ಗಿಸಿ ಕೈ ಮುಗಿದು ಶ್ರೀರಾಮನಿಗೆ ನಮಸ್ಕರಿಸಿ, "ಸ್ವಾಮಿಯೇ, ನಾವು ನಮ್ಮ ಅಜ್ಞಾನದಿಂದ ತೋರ್ಪಡಿಸಿದ ಆತುರಕ್ಕೆ ನಮ್ಮನ್ನು ಮನ್ನಿಸಿ ಕಾಪಾಡು. ಬ್ರಹ್ಮನ ಶಾಪದಿಂದ ನಮಗೆ ಯಾವಾಗ ವಿಮೋಚನೆ ಎಂಬುದನ್ನರುಹಿ ಕಾಪಾಡು. ಬ್ರಹ್ಮನ ಶಾಪದಿಂದ ನಮಗೆ ಯಾವಾಗ ವಿಮೋಚನೆ ಎಂಬುದನ್ನರುಹಿ ಕಾಪಾಡು" ಎಂದು ಬೇಡಿದರಂತೆ

ಆಗ, ಪರಮ ಕರುಣಾಮೂರ್ತಿಯಾದ ಶ್ರೀ ರಾಜಾರಾಮನು, "ಎಲೌ, ಕಪಿಗಳಿರಾ! ಪುಣ್ಯಭೂಮಿಯಾದ ಈ ಭರತವರ್ಷದಲ್ಲಿ ತಲೆತಲಾಂತರವಾಗಿ ಬಾಳಿ, ಇಲ್ಲಿ ಬೆಳೆವ ಹಣ್ಣು ಹಂಪಲುಗಳನ್ನು ಭುಜಿಸಿ ನಿಮ್ಮ ತನುಮನಗಳನ್ನು ಪುನೀತವಾಗಿಸಿಕೊಳ್ಳಿ ಆಗ ಒಂದಾನೊಂದು ಕಾಲದಲ್ಲಿ, ಮೋಹನದಾಸನ ಭೇರಿನಿನದದಿಂದ ಭಾರತ ಭೂಮಿಯೇ ರಾಮರಾಜ್ಯವೆನಿಸುವುದು, ಅದೇ ನಿಮಗೆ ಬಿಡುಗಡೆಯ ಸುಮುಹೂರ್ತ. ನಿಮ್ಮ ಶಾಪವಿಮೋಚನೆಯ ಸುಲಗ್ನ. ಅಂದರೆ ಅದುವರೆಗೂ ನನ್ನ ಭಕ್ತರಾದ ಮಾನವರು ನಿಮ್ಮನ್ನು ಕಪಿಗಳೆಂದೇ ಪೂಜಿಸಿ, ನಿಮಗೆ ದೇವಲೋಕಕ್ಕೆ ಹೊರಡಲು ಅಪ್ಪಣೆ ಕೊಡುವುದಿಲ್ಲ. ಆದರೆ, ಎರಡನೆಯ ರಾಮರಾಜ್ಯ ಪ್ರಾಪ್ತವಾಗುತ್ತಲೂ, ಅವರಿಗೆ ಜ್ಞಾನೋದಯವಾಗುವುದು. ತಮಗೆ ಸ್ವಾತಂತ್ರ್ಯ ಸಿಕ್ಕಿದಂತೆಯೇ, ಅವರು ಪರರಿಗೂ ಸ್ವಾತಂತ್ರ್ಯವನ್ನು ಸಂಪಾದಿಸಿಕೊಡಲು ಪ್ರಯತ್ನಿಸುವರು ನೀವು ಕಪಿದೇಹದಲ್ಲಿ ತೊಳಲುತ್ತಿರುವ ದೇವತೆಗಳೆಂದು ತಿಳಿದು, ನಿಮ್ಮ ಬಿಡುಗಡೆಯ ಸಲುವಾಗಿ ಅವರು ಕಪಿಯಾಗ

ವನ್ನೇರ್ಪಡಿಸಿ, ವಾನರ ಶರೀರದಿಂದ ನಿಮ್ಮನ್ನು ಬಿಡುಗಡೆ ಮಾಡುವರು. ಆ ತಕ್ಷಣವೇ ತಂಡೋಪ ತಂಡವಾಗಿ ನೀವು ದೇವಲೋಕಕ್ಕೆ ಹಿಂತಿರುಗಬಹುದು" ಎಂಬ ಅಭಯಾನುಗ್ರಹವಚನ ಸುಧೆಯಿಂದ ಮಹಾ ವಾನರ ಸೇನೆಯನ್ನು ತಣಿಸಿದನಂತೆ.

ಶುಂಡಕ ಪುರಾಣದ ಪ್ರಕಾರ, ದೇವತೆಗಳಿಗೆ ಆಗ ಒಂದು ವಿಷಯವಾದ ಭೀತಿ ಉಂಟಾಯಿತಂತೆ. ಕಪಿಶರೀರ ಹೋದರೂ, ಲಾಂಗೂಲ ಎಲ್ಲಿ ಉಳಿದು ಬಿಡುವುದೋ ಎಂಬ ಸಂದೇಹ ಕಾಡಿಸುತ್ತಿದೆ ಎಂದು ಅವರು ಶ್ರೀರಾಮಚಂದ್ರನಿಗೆ ತಿಳಿಸಿದಾಗ, ದಾಶರಥಿ ಅವರನ್ನು ಮತ್ತೂ ಸಂಬೋಧಿಸಿ, "ಲಾಂಗೂಲವನ್ನು ಭೂಲೋಕದಲ್ಲೇ ತುಂಡರಿಸಿ ದಹಿಸಲು ಆಗಿನ ನರರಿಗೆ ನಾನು ತಿಳುವಳಿಕೆ ಕೊಡುವೆನು. ಇನ್ನು ನೀವು ನಿರ್ಭಯರಾಗಿ ಬಾಳಿ........ಆ ಮೋಕ್ಷ ಮುಹೂರ್ತವನ್ನೇ ಎದುರು ನೋಡುತ್ತ, ನೀವು ನಿಮ್ಮ ಶಾಪ ಕರ್ಮಶೇಷವನ್ನು ಸವೆಸಿ" ಎಂದು ಹೇಳಿದನಂತೆ. ಕಪಿಸಮೂಹವು ತಮ್ಮ ತಮ್ಮ ಮರಗಳಿಗೆ ತೆರಳಿದುವಂತೆ. ಆದುದರಿಂದಲೇ ಅಶ್ವಮೇಧದಲ್ಲಿ ಕುದುರೆ ಕಾಯಲು ನರಸೇನೆಯನ್ನೇ ರಾಮನು ನಿಯಮಿಸಿದ್ದೆಂದು ತೋರುತ್ತದೆ.

ಶುಂಡಕ ಪುರಾಣದಲ್ಲಿ ಉಕ್ತವಾಗಿರುವ ವಿಷಯಗಳು ಅಕ್ಷರಶಃ ನಮ್ಮ ಕಣ್ಣಮುಂದೆ ನಿಜವಾಗಿ ನಡೆಯುತ್ತಿರುವುದನ್ನರಿತೂ, ಹಲವು ಯುವಕರು ಪುರಾಣಗಳನ್ನು ಹಳಿಯುವುದು ಶೋಚನೀಯವಲ್ಲದೆ ಮತ್ತೇನು?

—ಸೋಮಭಟ್ಟ.

— o —

ಮತವುಂಟು, ಮಿತಿಯಿಲ್ಲ; ಸೆಣಬುಂಟು, ಸೆಣಸುಂಟು;
ಇತಿಯಿಲ್ಲ, ಮಾತಿನಲಿ ನಿಜವಿಲ್ಲ, ನೆರೆಯವಗೆ
ಗತಿಯೊಂದೆ, ಮರುಭೂಮಿ, ಸರ್ವಜ್ಞ

ಕೈ ಹಿಡಿದಾತ ಕಿಡಿ ಕಿಡಿಯಾಗೋದು ಯಾಕೆ ?

ಶ್ರೀಮರ್ತಿ 'ಬುಳ್ಳಿ' ರ ಕ್ಷಮೆ ಬೇಡಿ

— ೧ —

'' ಸಮಾಜ, ಸಭೆ. ಸತ್ಕಾರಕೂಟ,
ಸೆಕ್ರೆಟರೀ ಆಕೆಗೆ ಸಾಯಂಕಾಲ,
ಸಂಗಡ ಸಿಂಗಲ್ಸ್ ಮ್ಯಾಚ ,
ಹಿಂದಿರುಗುತ್ತ ಸುಂದರಿಮನೆ ಆರತಿ,
ಏನೋ ಏಕೋ ಕೊಂಚ ಲೇಟು;
ಇರುವುದೋ ಬೇಯುದ ಬೇಳೆ,
ಇದರಿಂದಲೆ ಬರಿ ಅನ್ನ. ಹುಣಸೇ ಸಾರು,
ಏನೋ ಏಕೋ ಅನ್ನ ಬಿರುಸು, ಸಾರು ಸಾಲ್ಟಿಷ್ಷು ; ''
ಅಂದ್ಮಾತ್ರಕ್ಕೇ
ಕೈ ಹಿಡಿದಾತ ಕಿಡಿಕಿಡಿಯಾಗೋದು ಯಾಕೆ?

— ೨ —

'' ಸೀರೇ ಬಲು ಸಿಂಪಲ್ಲು,
ಸಿಂಗಲ್ ಮಾವಿನಕಾಯಿ ಬಾರ್ಡರ್ರು,
ಬಿಲ್ಲೇನೂ ಭಾರಿಅಲ್ಲ !
ಬರೀ ಆರೇ ಬ್ಲಾಜು ಪೀಸು ಜೊತೇಗೆ,
ಬೇಡವೆ ಬಳಸಲು ಸಂಜೆಗೆ ?
ಅದರಲ್ನಾಕೇ ಸ್ಯಾಟಿನ್ನು ,
ಮತ್ತಿನ್ನೆಲ್ಲಾ ಕಾಟನ್ನು ; ''
ಅಂತ ನಾನಂದ್ಮಾತ್ರಕ್ಕೇ
ಕೈ ಹಿಡಿದಾತ ಕಿಡಿ ಕಿಡಿ ಯಾಗೋದು ಯಾಕೆ ?

— ೩ —

'' ಬಡವೇಲಿ ಬಡವಳೆ ನಾನು !
ಹಡೆದವರು ಕೊಟ್ಟಿದ್ದಲ್ಲದೆ ಕೈ
ಹಿಡಿದವರು ಕೊಟ್ಟಿರುವುದು
ಏನು, ಎಷ್ಟು, ಎಲ್ಲಿ ?

ಸೇರಿದಮೇಲೆ ನಿಮ್ಮನೆಯ,
ಸುರೈಯ ಸರ, ಭಾನುಮತಿ ಬ್ಯಾಂಗಲ್ಸ್,
ಚಂದ್ರಲೇಖಾ ಚೈನು,
ಇಷ್ಟೇ ಅಲ್ಲವೆ ಅಡಿಷನ್ನು ?
ಈಗೊಂದು ನರ್ಗೀಸ್ ನೆಕ್‌ಲೇಸ್
ಮಾಡ್ಸಿದಕ್ಕೆ ಸಿಟ್ಟೇಕೆ ಇಷ್ಟು ಎರಪ್ಷನ್ನು ? ''
ಅಂದ್ಮಾತ್ರಕ್ಕೇ
ಕೈಹಿಡಿದಾತ ಕಿಡಿ ಕಿಡಿ ಯಾಗೋದು ಯಾಕೆ ?

— ೪ —

'' ಹೇಗೂ ಬೇಸಿಗೆ, ಹರಿಗೂ ರಜ,
ಬೆನ್ನಲಿ ಬಿದ್ದವ, ಬಲುಮುದ್ದಿನ ತಮ್ಮ,
ಬರಲೆಂದು ಬರೆದಿರುವೆ !
ಹಾಗೇ ಅಮ್ಮನು ಬರುವಳು—ಮುಖ ನೋಡಿ ಮೂರ್ತಿಂಗಳಾಯ್ತು !
ಅವಳಿಗು ಬಾರೆಂದು ಬರೆದಿರುವೆ.
ಅಲ್ಲದೆ ಮರತೆ—ಬಂದಿಹಳಂತೆ ಲಲಿತೆ ಬಾಗೂರಿಂದ,
ಬರಲಿ ಪಾಪ, ಮತ್ತಿನ್ನೆಲ್ಲಿದೆ ಹೋಗಲು ಭಾವನ ಮನೆಯಲ್ಲದೆ !
ಬರುವಳು ಅವಳೂ, ಬಾಲೂ, ಗಂಗೂ, ರಾಜೀ, ಸುಬ್ಬು, ಸೀತೂ, ಸಂಗಡ
ಏನ್ಮಾಡ್ಬೇಕು, ಟ್ರಿಪ್ಪೊಂದು, ಸಿನಿಮವೆರಡು.
ವಾಯಿಲ್ ಸೀರೆ ಅವಳಿಗೆ, ಅಮ್ಮನಿಗೊಂದ್ಮಡಿ ಬಟ್ಟೆ,
ಹಾಗೇ ಮಕ್ಕಳಿಗೊಂದೊಂದ್ಬಟ್ಟೆ,
ಇಷ್ಟೇ ತಾನೆ, ಏನಂತೆ ? '' ಅಂದ್ಮಾತ್ರಕ್ಕೇ
ಕೈ ಹಿಡಿದಾತ ಕಿಡಿಕಿಡಿಯಾಗೋದು ಯಾಕೆ ?
ಯಾಕೋ ಏನೋ ಯಾರಿಗ್ಗೊತ್ತು !
ಬೇಬಿಗಳ್ನ ಸಾಕಿಕೊಂಡು, ಬೇಯ್ಸೋ ಹೆಂಗ್ಸಿಗೇನು ಗೊತ್ತು !

—ಟ ಸುನಂದಮ್ಮ.

- - -

ಬಂಗಲಿ ನಾಯಿ

ನಮ್ಮ ಮನೆ ಇರುವುದು ಬೆಂಗಳೂರಿನ ಬಡಾವಣೆಯೊಂದರಲ್ಲಿ. ಆದ್ದರಿಂದ ಬೀದಿ ನಾಯಿಗಳ ಕಾಟ ಅಷ್ಟಾಗಿ ಇಲ್ಲ. ಆದರೂ, ಮನೆ ಮನೆಯಲ್ಲೂ ನಾಯಿ ಸಾಕುವ ಚಟ ಇರುವುದರಿಂದ, ರಾತ್ರಿ ನನಗೆ ನಿದ್ದೆ ಬರುವುದೇ ಕಷ್ಟವಾಗಿ ಹೋಗಿದೆ ನಾಯಿಗೂ, ನಾಯಿಯ ಯಜಮಾನನಿಗೂ ನಿಕಟವಾದ ಸಂಬಂಧ ಉಂಟೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆತನ ಸ್ವಭಾವ ಅದಕ್ಕೂ ಬರುತ್ತೆ. ಹೀಗಾಗಿ, ನಮ್ಮ ಬೀದಿಯ ಬಂಗಲಿ ನಾಯಿಗಳು ಹಲವು ಬಗೆಯವು ಅವರ ಗುಣ ದೋಷಗಳೆಲ್ಲ ಬೊಗುಳಿಕೆಯಲ್ಲಿ ವ್ಯಕ್ತವಾಗುತ್ತವೆ. ಮೇಷ್ಟರ ಮನೆ ನಾಯಿ ಬೊಗುಳಿದ್ದನ್ನೇ ಬೊಗಳುತ್ತಿರುತ್ತದೆ. ದಿನವೂ ಒಂದೇ ಪಾಠ. ಸ್ವಚ್ಛನಾಗಿ ಸ್ಪಷ್ಟವಾಗಿ ಗೊಳ್ ಗೊಳ್ ಎಂದು ಗಂಟೆಗಟ್ಟಲೆ ಕೂಗುತ್ತದೆ. ಭಾಗವತರ ಮನೆ ನಾಯಿ ರಾಗ ತಾಳ ಬದ್ಧವಾಗಿ ಶ್ರುತಿ ಹಿಡಿದು ಊಳಿಡುತ್ತದೆ. ರೇಷನ್ ಆಫೀಸರ್ ಮನೆನಾಯಿ ತೋಳನ ಹಾಗೆ ಕುಳಿತ ಕಡೆಯಿಂದ ಅಲ್ಲಾಡ ಲಾರದೆ, ಇಲ್ಲ ಇಲ್ಲ ಇಲ್ಲ ಎಂದು ನಕಾರ ನುಡಿಯುತ್ತಿರುತ್ತದೆ. ಸಬ್ ಇನ್ಸ್ಪೆಕ್ಟರ ಮನೆ ನಾಯಿಯಂತೂ, ಕಂಡವರನ್ನೆಲ್ಲ ಕೇಡಿಯೆಂದೇ ಭಾವಿಸಿ ಹಿಡಿ ಹೊಡಿ ಎಂದು ಶಪಿಸುತ್ತಿರುತ್ತದೆ. ಲಾಯರ್ ಮನೆ ನಾಯಿಗೆ ಅತಿ ವಿನಯ; ಅದರ ಬೊಗುಳಲ್ಲಿ ಸ್ವಾಗತದ ಆದರವಿದೆ. ಇನ್ಷ್ಯೂರೆನ್ಸ್ ಏಜೆಂಟರ ಮನೆಯದಕ್ಕೆ ಬಾಲವಾಡಿಸುವುದೇ ಕೆಲಸ; ಅದರ ಬೊಗುಳು ಕೇಳಿದರೆ, ಎಂಥವನಿಗೂ ಅದರ ಹತ್ತಿರ ಹೋಗಿ ಬೆನ್ನು ಸವರಬೇಕೆನಿಸುತ್ತದೆ. ಎಂಜಿನಿಯರ್ ಮನೆ ನಾಯಿ ಗೋಡೆಗಳ ಎತ್ತರವನ್ನು ಊಹಿಸುವುದರಲ್ಲೂ, ತಾರಸಿಯಿಂದ ಚಜ್ಜೆಗೆ ಧುಮುಕು ವುದರಲ್ಲೂ ಪ್ರವೀಣ.

ಈ ಎಲ್ಲ ನಾಯಿಗಳೂ ಅದರದರ ಗೇಟಲ್ಲಿ ಕುಳಿತು, ರಾತ್ರಿ ನಾನು ಮಲಗಿದ ಮೇಲೆ, ನಡಸುವ ಸಂಭಾಷಣೆ, ಎಬ್ಬಿಸುವ ರಂಪ, ಹೂಡುವ ಪಿತೂರಿ, ಮಾಡುವ ಟೀಕೆ ಬಹಳ ಸ್ವಾರಸ್ಯವಾಗಿರುತ್ತದೆ ಅರಿತವರಿಗತಿ ಸುಲಭ, ಅವುಗಳ ಭಾಷೆ ತಿಳಿಯುವುದು


ಎಲ್ಲ ಮನೆಗಳಲ್ಲೂ, ದೀಪ ಆರಿಸಾಯಿತೆಂದರೆ, ಭಾಗವತರು ಮೆತ್ತಗೆ ಗಂಟಲು ಸರಿಪಡಿಸಿಕೊಂಡು, ಸ ಪ ಸ ಎಂದು ಬೊಗಳುತ್ತಾರೆ. (ನಾನೂ

ನಮ್ಮ ಅಣ್ಣನೂ ಆಯಾಯಾ ಮನೆ ನಾಯಿಗಳಿಗೆ ಅವುಗಳ ಮನೆ ಯಜಮಾನರ ಕಸಬಿನ ಹೆಸರನ್ನೇ ಹೇಳುವುದು ವಾಡಿಕೆ) ಕೂಡಲೇ ಎದುರು ಮನೆ ಮೇಷ್ಟರು ಸೈಲೆನ್ಸ್ ಎಂದು ಗಟ್ಟಿಯಾಗಿ ಬೊಗಳುತ್ತಾರೆ, (ಅಂದರೆ, ಮೇಷ್ಟರ ಮನೆ ನಾಯಿ ಮುಚ್ಕೋ ಎಂದು ಕೂಗುತ್ತದೆ) ಆಗ ಇನ್‌ಷ್ಯೂರೆನ್ಸ್ ಏಜಂಟರು ಅಡ್ಡ ಬಂದು, ಹೇಳಲಿ ಪಾಪ, ಅಭ್ಯಾಸ ಮಾಡುವುದಕ್ಕೆ ರಾತ್ರಿ ಪ್ರಶಾಂತವಾಗಿದೆ, ಮಾಡಿಕೊಳ್ಳಲಿ, ನೀವು ಯಾಕೆ ತಡೆಯುತ್ತೀರಿ ಎಂದು ಮೇಷ್ಟರನ್ನು ತಡೆಯುತ್ತಾರೆ. ಸರಿ! ಸಬ್ ಇನ್‌ಸ್ಪೆಕ್ಟರು ಗದರಿಸಿ ಹಾರಿಬಂದು, ಭಾಗವತರ ಮೇಲೆ ಬಿದ್ದು, ಮೇಷ್ಟರನ್ನು ಮೂಲೆಗೋಡಿಸಿ, ಏಜಂಟರ ಬಾಲವನ್ನು ಮಡಿಸುತ್ತಾರೆ. ಲಾಯರ್ ಮನೆ ನಾಯಿ, ಇದು ನ್ಯಾಯವಾ?, ಕಾನೂನಿಗೆ ವಿರೋಧ ಎಂದು ಸೆಕ್ಷನ್ ಸೆಕ್ಷನಾಗಿ ಬೊಗಳುತ್ತದೆ. ರೇಷನ್ ಆಫೀಸರ್ ನಾಯಿ ಕೂತ ಕಡೆಯಿಂದಲೇ ಎಲ್ಲರನ್ನೂ ಬೈದು ಕೆಡವುತ್ತದೆ. ನಾಳೆಯಿಂದ ನಿಮ್ಮ ಬಾಯಿಗೆ ಮಣ್ಣು ಎಂದು ಹೆದರಿಸುತ್ತದೆ.. ..

ಈ ಗಲಾಟೆಯಲ್ಲಿ ನಮ್ಮ ಮನೆಯಲ್ಲಿ ನನಗೂ ಅಣ್ಣನಿಗೂ ನಿದ್ದೆ ಬರುವುದು ತಾನೆ ಹೇಗೆ?

—ಪುಟ್ಟ ಶೀನು.

o



೨೦೫೦ ರಲ್ಲಿ

ಯಾರದೋ ಈ ಪ್ರತಿಮೆ! ಇಷ್ಟು ಚೆನ್ನಾಗಿ ಕೆತ್ತಿದ್ದಾರೆ.!

ಸೀಸನ್ ಸಂಕಟ

ಈ ಮದುವೆ ಸೀಸನ್ ಯಾಕೆ ಬರುತ್ತೋ ದೇವರೇ, ಅಂತಅನ್ನಿಸಿಬಿಟ್ಟಿದೆ, ನನಗಂತೂ. ನಾನೇನು ಸಂನ್ಯಾಸಿಯಲ್ಲ, ನನಗೂನೂ ಮನೆ ಮಡದಿ ಮಕ್ಕಳು ಅಳಿಯಂದಿರು, ಮೊಮ್ಮಕ್ಕಳು ಎಲ್ಲ ಸೌಭಾಗ್ಯವೂ ಇದೆ. ಒಂಬತ್ತು ಡಿಸ್ಟ್ರಿಕ್ಟ್‌ಗಳಲ್ಲೂ ನಂಟರು ಹಬ್ಬಿ ಬೆಳೆಯುತ್ತಿದ್ದಾರೆ. ಅವರಿಗೆಲ್ಲ ನನ್ನ ನೆನಪು ಇದೆ. ಅವಳ ನಂಟರು ಬೇರೆ ಒಳ್ಳಾರಿ ಹಿಂದೂಪುರ ಹೊಸೂರು ಹರಪನಹಳ್ಳಿ ಹೀಗೆ ಎಂಟು ದಿಕ್ಕಿಗೂ ವ್ಯಾಪಿಸಿದ್ದಾರೆ. ಅವರಲ್ಲೊಬ್ಬರೂ ಅವಳನ್ನು ಮರೆತಿಲ್ಲ. ಈ ಸೀಸನ್ ಒಂತು ಅಂದ್ರೆ ಸರಿ, ನಮ್ಮಮನೇಗೆ ಲಗ್ನಪತ್ರಿಕೆಗಳನ್ನು ತಂದು ಕೊಡುವುದಕ್ಕಾಗಿಯೇ ಕಿದ್ವಾಯಿ ಅವರು ಒಬ್ಬ ಅಂಚೆಯವನನ್ನು ನೇಮಿಸ ಬೇಕಾಗಿ ಬಂದಿದೆ.


ಎಲ್ಲಿಗೇ ಅಂತ ಹೋಗೋದು? ಯಾವ ಸಭೆಯನ್ನು ಅಲಂಕರಿಸುವುದು? ಯಾವ ವಧೂವರರನ್ನು ಆಶೀರ್ವದಿಸುವುದು? ಧರ್ಮಸಂಕಟ, ಅಲ್ಲಿಗೆ ಹೋದರೆ ಇಲ್ಲಿಯವರಿಗೆ ಕಣ್ಣು ಕೆಂಪು! ಅಲ್ಲದೆ, ರಜ ಸಿಗಬೇಕು, ಇವಳಿಗೆ ಅನುಕೂಲವಿರಬೇಕು; ಆ ಮಗುವಿಗೆ ದಡಾರ, ಈ ಮಗಳ ಬಾಣಂತನ ... ಸಾಲದ್ದಕ್ಕೆ, ರೈಲು ಸಂಚಾರ ದಿನದಿನಕ್ಕೂ ಅಪಾಯಕರವಾಗುತ್ತಿದೆ; ಬಸ್ಸಂತೂ ಓವರ್‌ಲೋಡು, ಆ ಕಂಡಕ್ಟರುಗಳು ಡ್ರೈವ್ ಮಾಡೋವಾಗ ಚಕ್ರವೇ ಕೈಗೆ ಕಿತ್ತು ಬರುತ್ತದೆ, ಬ್ರೇಕಿಲ್ಲದೆ ಬರಿಯ ಹಾರನ್ ಬಲದಿಂದಲೇ ಓಡಾಡುವ ಮಾರಕ ವಾಹನಗಳು... ಮತ್ತೆ, ಹಣದ ಅಭಾವ! ಅಲ್ಲಿಗೂ ಅದೇ ರೋಗ, ಡಿಲ್ಲಿಗೂ ಅದೇ ಕೊರತೆ, ನನಗೂ ಅದೇ ಗೋಳು....ಸಂಬಳದ ಕವರನ್ನು ಮನೆಗೆ ತರುವುದೇ ಗಲ್ಲಿಗಳ ಮೂಲಕ ...ಮೂರನೆಯ ತಾರೀಖಿಗೆ ಸಾಲಗಾರರಿಗೆಲ್ಲಾ ಮೂರು ನಾಮ!

ಆದ್ದರಿಂದ ನಾವು ಹೋಗೋದು ಬೇಡ, ಇಲ್ಲೇ ಇದ್ದುಕೊಂಡು, ಯಾವುದಾದರೂ, ಉಡುಗೊರೆ ಕಳುಹಿಸಿಬಿಡೋಣ ಅಂತ ಅವಳ ಬಾಯಲ್ಲಿ ಅನ್ನಿಸಬೇಕಾದರೆ, ಆರು ಗಂಟೆ ಚರ್ಚೆ. ಸರಿ. ಉಡುಗೊರೆ? ಅಗ್ಗವಾಗಿರಬೇಕು, ಹೊಸದಾಗಿರಬೇಕು, ಅನುರೂಪವಾಗಿರಬೇಕು, ೭೦೦ ರೂ. ಸಂಬಳ ತರುವ ಶ್ರೀಮಂತ ನಂಟನ ಗೌರವ, ಅಂತಸ್ತು, ಕೀರ್ತಿ ಇವುಗಳಿಗೆ ತಕ್ಕಂತಿರಬೇಕು, ಕಲ್ಯಾಣ ನಗರ, ರಾಮರಾಜ್ಯ, ಮಾದರಿ ಸಂಸ್ಥಾನ, ಕನ್ನಡದ ಕಣ್ಮಣಿ, ಕಲಾವಿಲಾಸದ ತವರೂರು ಇತ್ಯಾದಿ ಬಿರುದಾಂಕಿತ ಬೆಂಗಳೂರಿಗೆ ಹೆಸರು

ತರುವಂಥದ್ದಾಗಿರಬೇಕು. ಟಪಾಲಿನಲ್ಲಿ ರವಾನಿಸುವಂತೆ ಚಿಕ್ಕದಾಗಿರಬೇಕು; ಸಭೆಯಲ್ಲಿ ಓದಿಸುವಾಗ, ಜನರ ಕಣ್ಣಿಗೆ ಬೀಳುವಷ್ಟು ದೊಡ್ಡದಾಗಿರಬೇಕು. ಕಿಟ್ಟುಮಾವ ಕಳುಹಿಸಿದ್ದು ಅಂತ ನಾಲ್ಕು ದಿನ ಹೇಳುವಂಥದ್ದಾಗಿರಬೇಕು, ಸಂಸಾರ ಜೀವನಕ್ಕೆ ಅನುಕೂಲಿಸಿದರೆ ಒಳ್ಳೆಯದು; ಇತರರು ಯಾರೂ ಕಳುಹಿಸದೆ ಇದ್ದದ್ದಾಗಿರಬೇಕು. ಹಾಗೆಂದು ಹೇಳಿ ಕೇವಲ ಸೌಟು ಬಾಣಲಿ ಯಾಗಿರಬಾರದು; ಇದ್ದರೂ, ಬೆಳ್ಳಿಯದಾಗಿರಬೇಕು. ಆದರೆ, ಎಲ್ಲಕ್ಕಿಂತ ಅಗ್ಗವಾಗಿರಬೇಕು; ಗಟ್ಟಿಯಾಗಿರಬೇಕು; ಹೊಳೆಯಬೇಕು; ಜನ ಹೊಗಳ ಬೇಕು....ಕಡೆಗೆ ನನಗೆ ಸಾಲ ಕೊಡುತ್ತಿರುವ ಅಂಗಡಿಯಲ್ಲಿ ಸಿಗುವ ಪದಾರ್ಥ ವಾಗಿರಬೇಕು. ಕಟ್ಟಕಡೆಗೆ, ಆ ಮಹಾರಾಯ ನಮ್ಮ ಮನೆಗೆ ಮುಯ್ಯಿ ಒಪ್ಪಿಸಿದ ವಸ್ತುವಿಗಿಂತ ಬೆಲೆಯಲ್ಲಿ ಕಡಮೆ ಇರಬಾರದು; ಹೆಚ್ಚು ಬೆಲೆಯ ದಂತೂ ಸಾಧ್ಯವೇ ಇಲ್ಲ.

ಇಂಥ ಕಟುವಾದ ಸಮಸ್ಯೆಗಳು ಹತ್ತಾರು ಒಟ್ಟಿಗೆ ತಲೆಯನ್ನು ತಿನ್ನು ತ್ತಿರುವಾಗ ಅವೆಲ್ಲ ಒಟ್ಟಿಗೆ ಒಂದೇ ಸೀಸನ್‌ನಲ್ಲಿ ವಕ್ರಿಸಿರುವಾಗ ಅಂಥ ಉಡುಗೊರೆಗಳಿಗಾಗಿ ಹುಡುಕಿ ಹುಡುಕಿ ಹದಗೆಟ್ಟು, ಬೆಂಡಾದ ನಾನು, ಇಷ್ಟು ನೆಮ್ಮದಿಯಾಗಿ ಈ ಲೇಖನವನ್ನು ಬರೆಯುತ್ತಿರುವುದೇ ಆಶ್ಚರ್ಯ, ಅಲ್ಲವೆ?

—ಗಂಗಾಧರ.



ಸೀನು ಹ್ಯಾಗೆ ಕೂತ್ಕೋತೀ ಈ ಜಟ್ಕಾದಲ್ಲಿ ಅಂತ ನೋಡಂಕ್ಕೆ ನಿಂತಿದೀವಿ.

ಭೀಮ ಬಂಗಾರಯ್ಯ

—— o ——

ಮಂಗಳವಾರ ಮುಂಜಾನೆ ಥಳಿ ಥಳಿಯಾಗಿತ್ತು ವಾತಾವರಣ. ಅವತ್ತೆ ಕುಪ್ಪುಸ್ವಾಮಿಗೆ ರಜ. ಅವತ್ತೆ ಅವನಿಗೆ ಹರಟೆಗೆ ಬಿಡುವು. ಕಾಲು ಆಕಡೆಗೇ ಎಳೆಯಿತು ಹೊರಟೆ. ಇಣಿಕಿದಾಗ ಒಂದೇ ಬಾಗಿಲು ತೆಗೆದಿತ್ತು ಕುಪ್ಪುಸ್ವಾಮಿ ಒಬ್ಬನೆ ಕತ್ತಿ ಮಸೆಯುತ್ತಿದ್ದ ನನ್ನ ಕತ್ತು ಕಂಡೊಡನೇ ನಸುನಕ್ಕು 'ಬನ್ನಿ' ಎಂದು ತನ್ನ ಕತ್ತಿನಿಂದ ಹೇಳಿದ. ಹೋಗಿ ಸೋಫಾದ ಮೇಲೆ ಕುಳಿತು ಬಳಿಯ ಹಳೆಯ ಪತ್ರಿಕೆ ಕೈಗೆ ತೆಗೆದುಕೊಂಡು ಬೊಂಬೆ ನೋಡತೊಡಗಿದೆ. ಟಿಕ್ ಟಿಕ್ ಎಂದು ಮುಂಬಾಗಿಲು ಬಡಿದ ಸದ್ದಾಯಿತು. "ಬನ್ನಿ" ಎಂದು ಕುಪ್ಪುಸ್ವಾಮಿ ಹೇಳಿದ. ಒಳಗೆ ಕಾಲಿಟ್ಟು ಬಂದು ।ಸಿಂಹಾಸನವನ್ನೇರಿದ ರೀವಿಯಿಂದ ಎತ್ತರದ ಕುರ್ಚಿಯನ್ನೇರಿ ಕುಳಿತ ವ್ಯಕ್ತಿ "ಕುಪ್ಪುಸ್ವಾಮಿ—ಕತ್ತರಿಸು ಕಪಕಪನೆ ಕಿತ್ತೊಗೆ ಈ ನಾಟಕದ ಕ್ರಾಪನ್ನು" ಎಂದು ಒಂದೇ ಉಸುರಿಗೆ ಹೇಳಿತು.

"ಎಲ್ಲಾ ಬಿಟ್ಟು ಮಂಗಳವಾರ—ಬಂಗಾರಯ್ಯನವರೇ—ಏನು ನೀವು ಅಂತಿರೋದು........?........" ಎಂದು ಹೌಹಾರಿದ ಕುಪ್ಪುಸ್ವಾಮಿ.

"ಮೋಸ, ಕೃತ್ರಿಮ, ದಗಲಬಾಜಿ........ಉಂಡಮನೆಗೆ ಗುಂಡಿಡುವ ಭಂಡರು ಈ ಜಗತ್ತಿನಲ್ಲಿ. ಇಷ್ಟು ಸಾಕು ಈ ನಾಟಕ ಕುಪ್ಪು; ಏನು ಮುಖ ನೋಡುವೆ? ನೀರು ಸವರಿ ಕತ್ತಿಬಿಡು ಹೂಂ........" ಎಂದು ಕಾರ್ಮೋಡ ತುಂಬಿದ ಬಾನಿನಿಂದ ಮಿಂಚಿನ ಗೊಂಚಲು ಹರಿದು ಬಂದಂತೆ ವದರಿದರು ಬಂಗಾರಯ್ಯನೋರು.

ಭಾರವಾದ ಹೆಜ್ಜೆಹಾಕುತ್ತ ಕುಪ್ಪುಸ್ವಾಮಿ ಬಂಗಾರಯ್ಯನವರ ಬಳಿ ಸಾರಿ ಬಿಳಿಯ ಬಟ್ಟೆಯನ್ನು ಕತ್ತಿನವರೆಗೆ ಮುಚ್ಚಿ ಹಿಂದೆ ಪಿನ್ನು ಹಾಕಿ ಆ ತುಂಬಿದ ತಲೆಯನ್ನು ದಿಟ್ಟಿಸಿ ನೋಡಿದ. ಯಾವುದೋ ಹಳೆಯ ನೆನಪು ಬಂದು ಎರಡೂ ಕೈಗಳಿಂದ ಆ ಉದ್ದನೆಯ ನಾಟ್ಯಾಚಾರ್ಯನ ಕ್ರಾಪನ್ನು ನೇವರಿಸಿದ. ನಿಡಿದಾದ ಉಸಿರೊಂದು ಹೊರಹೊಮ್ಮಿತು. ಸಿಂಹಾಸನವನ್ನೇರಿ ರತ್ನಮುಕುಟ ಧರಿಸಿದ ತಲೆ—ಪರಶಿವನಿಂದ ಹರಸಿಕೊಂಡ ಶಿರ—ಗುಂಗುರು ಕ್ರಾಪಿನ ಮೇಲೆ ದುಷ್ಯಂತನಾಗಿ ಧರಿಸಿದ ರುಮಾಲು—ಹೊ! ಒಂದೆ, ಎರಡೆ, ಹತ್ತಾರು ಘಟನೆಗಳು, ತರಂಗ ತರಂಗವಾಗಿ ಕುಪ್ಪುಸ್ವಾಮಿಯ ತಲೆಯನ್ನು ಸಂಚರಿಸಿತು. ತಲೆ ತಾನಾಗೇ ಬಗ್ಗಿತು—ಥಳಕ್ಕನೆ ಕಣ್ಣಿಂದ ಒಂದು ಹನಿ

ಬಂಗಾರಯ್ಯ ಹೊದ್ದ ಬಟ್ಟೆಯ ಮೇಲೆ ಬಿತ್ತು. ಬಂಗಾರಯ್ಯನಿಗೂ ಕಣ್ಣು ಒದ್ದೆಯಾಯಿತು. ಹಾಗೇ ಮೇಲು ಹೊದಕೆಯೊಡಗೂಡಿ ಮೇಲೆದ್ದು ನಾನು ಕುಳಿತ ಸೋಫಾದ ಮೇಲೆ ಬಂದು ಕುಳಿತ. ಕುಪ್ಪುಸ್ವಾಮಿಯೂ ಎದುರಿನ ಬೆಂಚಿನಮೇಲೆ ಕುಳಿತು ಅವಡುಗಚ್ಚಿ ಒಂದೇ ಸಮನೆ ಕತ್ತಿಮಸೆಯುವುದರಲ್ಲಿ ತಲ್ಲೀನನಾದ. ಕೊಂಚ ಹೊತ್ತು ಇಡೀ ಸಲೂನಿನಲ್ಲಿ ಮೌನ ಆವರಿಸಿತು. ತಟಕ್ಕನೆ ಕುಪ್ಪುಸ್ವಾಮಿ ಎದ್ದು ಅತ್ತಿಂದ ಇತ್ತ ತಿರುಗಾಡತೊಡಗಿ ಇದ್ದಕ್ಕಿದ್ದ ಹಾಗೆ "ಬಂಗಾರಯ್ಯ—ಯಾಕೆ ಈ ನಿರ್ಧಾರ !........ವಿಷಯವೇನು........ ಹೇಳಬಾರದೆ ?........" ಎಂದು ಅಂಗಲಾಚಿದ. ನಾನು ಕೂಡ ಬಂಗಾರಯ್ಯ ನವರ ಅಮೃತವಾಣಿಗೆ ಕಿವಿ ತಿರುಗಿಸಿದೆ.

"ರಾಕ್ಷಸರು—ನರಾಧಮರು—ಕಟುಕರು—ಯಾಕೆ "ರು" ! ಕಟುಕ— ಚಂಡಾಲ ಚಿನ್ನದ ಮೊಟ್ಟೆಯಿಡುವ ಬಾತಿನ ಹೊಟ್ಟೆಗೆ ಕತ್ತಿ ಚುಚ್ಚಿದ ಆ ಪಾಪಿ ಪಾಪಣ್ಣ !........"

"ಪಾಪಣ್ಣ !........"

ಹೂಂ—ಅದೇ ನಮ್ಮ ಪಾಪಣ್ಣ—ನಮ್ಮನ್ನ ಉದ್ಧಾರಮಾಡಿ ಉಪ್ಪರಿಗೇಲಿ ಮೆರಿಸ್ತೀನಂತ ಮುಖಕ್ಕೆ ಬಣ್ಣ ಬಳಿದು ಕುಣಿಸಿದನಲ್ಲ ಅದೇ ಕಂಪನಿ ಪಾಪಣ್ಣ........"

"ಏನು ಮಾಡ್ದ—ಕಂಪನಿ ಪಾಪರ‍್ರೆ ? ನಿಮ್ಮಂತೋರು ಹೀಗಂದ್ರೆ ಇನ್ನ ಘರದೆ ಎಳಿಯೋರ ಗತಿ ?........"

"ಗತಿ ಗಂಗಮ್ಮನ ಪಾಲು—ಕುಪ್ಪು, ನೀನಿನ್ನು ಕೂಸು ನಿನಗೆ ಏನೂ ತಿಳೀದು—ಕೇವಲ ಕೃತ್ರಿಮರ ಸಂತೆ ಅದು.. .....ನೆನಸಿಕೊಂಡರೆ ಮೈ ಉರಿದು ಬರುತ್ತೆ... .....ಆ ಸಿಟ್ಟಿನಲ್ಲೇ ಹೇಳಿದ್ದು ನಿನಗೆ ಕತ್ತರಿಸಿ ಕಿತ್ತೊಗೆ ಈ ಹಾಳು ಕ್ರಾಪೂಂತ.... ..."

ಇದೇ ಸಮಯ ನೋಡಿ ನಾನು....... ವಿಷಯ ವಿವರವಾಗಿ ತಿಳಿಕೊ ಬೇಕೂಂತ ಕೊಂಚ ಕೆದಕಿ ಕೈಬಿಟ್ಟೆ........ "ಪರೋಪಕಾರೀಂತ ಬಿರುದು ಬಂತು ಪಾಪಣ್ಣೋರಿಗೇ... ..." ಎಂದು ಉದ್ಗಾರ ತೆಗೆದೆ. ಬಂಗಾರಯ್ಯನವರು ರೇಗಿ ಕೆಂಕಣ್ಣು ಬೀರಿ ಹಸನಾದ ಹುರಿಮೀಸೆ ತಿರುವುತ್ತಾ ಮುಷ್ಟಿಮಾಡಿ ಗುದ್ದುತ್ತಾ ಕಿರುಚಿದರು.

"ಪರೋಪಕಾರಿ... ....ಹತ್ತು ಜನ ಹಿರೋ ಪಾರ್ಟನವರಿಗೆ, ನೂರು ಜನ ಕಂಪನಿ ಕುನ್ನಿಗಳ ಹೊಟ್ಟೆ ಹೊಡೆದು ಅರ ಹೊಟ್ಟೆಗೆ ಹಾಕೊ ಅರೆವಟ್ಟೆ ಕಟ್ಟಿಸಿ

ನಾನೂ ಆಗಬಲ್ಲೆ ಪರೋಪಕಾರಿ—ಸಾಕು ಸುಮ್ನನೆ ಇರ್ರಿ ಕಂಡಿದೀನಿ........"
ಎಂದು ನನ್ನ ಬುಸುಗುಟ್ಟುತ್ತಾ ನೋಡಿದರು. ಈ ನೋಟ ಹಿರಣ್ಯಕಶುಪು
ಪಸುಳೆ ಪ್ರಹ್ಲಾದ 'ಹರಿ ಹರಿ' ಎಂದಾಗ ನೋಡಿದ ನೋಟದಂತಿತ್ತು.

ಮಸೆದ ಕತ್ತಿ ಮೇಜಿನಮೇಲಿಡುತ್ತಾ ಕುಪ್ಪುಸ್ವಾಮಿ "ಆದದ್ದಾದರ ಏನು
ಹೇಳಬಾರದ ಬಂಗಾರಪ್ಪಾ........" ಎಂದು ಕೇಳಿದ.

"ಕಂಪನಿ ಬಿಟ್ಟು ಬಿಟ್ಟೆ........" ಎಂದು ಹಣೆಯನ್ನು ನೆರಿಗೆ ನೆರಿಗೆಯಾಗಿ
ಮಡಿಸಿ ಅರೆ ಮುಚ್ಚಿದ ಕಣ್ಣಿನಿಂದ ಹಿಮಾಚಲದ ಬುಡದಲ್ಲಿ ಶಿವಪಾರ್ವತಿ
ಯರಿಗೆ ಶರಣು ಶರಣೆನ್ನುತ್ತಾ ಕೈಮುಗಿದು ಕುಳಿತ ರಾವಣನಂತೆ ಹೇಳಿದರು.
ಅವರ ವಾಣಿ ಭಾರವಾಗಿತ್ತು. ವಿಭೀಷಣ ರಾಮರ ಪಕ್ಷಕ್ಕೆ ಸೇರಿದನೆಂಬ ವಾರ್ತೆ
ಬಂದಾಗ ರಾವಣಾಸುರ ನಿಟ್ಟುಸಿರು ಬಿಟ್ಟಂತೆ ಒಂದು ಉದ್ಗಾರ ಎಳೆದರು.

"ಕನ್ನಡ ನಾಟಕ ಕಲೆಯ ಅವನತಿ !........" ಎಂದು ನಾನು ಮರುಗಿದೆ.
'ಕಲಾವಿದರ ಕೊಲೆ' ಎಂದು ಚಿಂತಿಸಿದೆ.

"ಮನುಷ್ಯ ಜಾತೀನೆ ನಾನು ನಂಬಲಾರೆ—ಅದರಲ್ಲೂ ಶ್ರೀ ಹರಿಯ
ಭಕ್ತರಂತೆ ನಟಿಸಿ ಮೋಸಮಾಡುವಂಥ ಜನರ ಸಹವಾಸ ಮಾಡಿದ ಮೇಲೆ
ನಾನು ಈ ಕೇಶ ರಾಶಿಯನ್ನು ಕಿತ್ತೊಗೆ ಎನ್ನುವುದರಲ್ಲಿ ಅರ್ಥವಿದೆ" ಎಂದು
ಬಂಗಾರಯ್ಯನವರು ಹೇಳತೊಡಗಿದ್ದು ನೋಡಿ ಕುಪ್ಪುಸ್ವಾಮಿ ನಾನು ಇಬ್ಬರೂ
ಒಂದೊಂದು ಬತ್ತಿಹಚ್ಚಿ ಬಂಗಾರಯ್ಯನವರಿಗೂ ಒಂದು ಕೊಟ್ಟೆವು. ಆಳವಾಗಿ
ಹೊಗೆ ಎಳೆದು ಮುಂದುವರಿಸಿದರು. ...."

"ಕುಳ್ಳಾದ ಮಾತ್ರಕ್ಕೆ ಕೃಷ್ಣನ ಪಾರ್ಟು ಮಾಡಲು ಸಾಧ್ಯವೆ ? ಕಂಚು
ಕಂಠ ಅಲ್ಲದಿದ್ದರೂ ಗೋಪಿಯರನ್ನು ಕಾಡಿ ಹಾಡ ಬೇಕೆ ? ಪ್ರೇಕ್ಷಕರ ಪಾಡು
ನೋಡುವವರಾರು ? ಬೇಲಿಯೇ ಎದ್ದು ಹೊಲ ಮೆಯ್ದು ಹಾಗೆ ಮಾಲೀಕನೆ
ಮೊದಲು ಮಾರುತಿ ಪಾರ್ಟು ಮಾಡಿದಫೆ—ನಮ್ಮಂಥವರು ಎಲ್ಲಿ ಹೋಗ
ಬೇಕು........"

"ಸರಿಯಾದ ಮಾತೆ" ಎಂದ ಕುಪ್ಪುಸ್ವಾಮಿ.

"........ಹಾಳಾಗಿ ಹೋಗಲಿ ಅವನ ಮೀಸೆ ಅವನು ಬೋಳಿಸೋಕೆ
ಡೊಣೆ ನಾಯಕನ ಅಪ್ಪಣೆಯೇ ? ಅವನದೇ ಕಂಪನಿ ಅವನೇ ಮಾಲೀಕ
ನಮಗೇನು ಬಣ್ಣಬಳಿದದ್ದಕ್ಕೆ ಕೂಲಿ ಬಂದರೆ ಆಯ್ತು. ಇವತ್ತು ಈ ಸಲೂನಲ್ಲಿ
ಹೇಳ್ತೀನಿ ನನ್ನ ಸಮಾನ ಭಯಂಕರ ಪಾರ್ಟುಗಳು ಮಾಡೊ ಮಗ ಯಾರಿದ್ದಾರೆ
ಬೆಟ್ಟು ಮಡಿಚಿ........'

"........ಯಾರಿದಾರೆ........ಯಾರ್ರೂ ಕಾಣೆ........"

" ಮಾತಾಡಿದ್ದು ಮುನ್ನೂರು ರೂಪಾಯಿ ಸಂಬ್ಳ ಮೂರು ತಿಂಗಳಾದರೂ ಮೂವತ್ತು ರೂಪಾಯಿ ಕೊಡಲಿಲ್ಲ ಆ ಪಾಪಣ್ಣ ಅಂದರೆ, ಇನ್ಯಾಕಯ್ಯ ನಾವು ಕಂದ ಹಾಡಬೇಕು ? ....ಕುಪ್ಪು ನೀನೇ ಹೇಳು—ಕತ್ತರಿಸಿ ಬಿಸಾಕು ಈ ನಾಟಕದ ಕ್ರಾಪೂಂತ ಅಂದದರಲ್ಲಿ ಏನಾಶ್ಚರ್ಯ ವಿಷಯ ಹೀಗಿರುವಾಗ........"

" ಹೂಂ........ಸರಿ ಆ ಮೇಲೆ ?........"

" ಆಮೇಲೇನು—ಈ ಕಲಾ ಸೇವೇನೂ ಸಾಕು ಈ ಕಂಪನಿ ಬಾಳೂ ಸಾಕು—ಕೃಷ್ಣ ಭವನ ಸೇರಿ ಸರ್ವರ್ ಆದರೂ ಚಿಂತೆಯಿಲ್ಲ ಈ ಹಾಳು ನಾಟಕದ ಸಹವಾಸ ಸಾಕು........"

" ಪಾಪಣ್ಣ ಹಾಗೆ ಮಾಡಲಿಕ್ಕೆ ಕಾರಣವಾದರೂ ಏನು ? ಕಲೆಕ್ಷನ್ ಚೆನ್ನಾಗಿರ್ತಾ ಇತ್ತಲ್ಲ ! "

" ಎಲ್ಲಾ ಇತ್ತು ಸರಿ........ಆದರೆ ಕೊಡೋ ಬುದ್ಧಿ ಇರಲಿಲ್ಲ........ನಾನೂ ಮುಯ್ಯಿಗೆ ಮುಯ್ಯಿ ತೀರಿಸುತ್ತಾ ಬಂದು ಮೊನ್ನೆ ' ಕಡೇ ನಾಟಕ ' ಪ್ರಹ್ಲಾದ ದಲ್ಲಿ ಕಾಡಿಸಿದ ಲಾಗಾಯ್ತು ಅವನ ಸಿಟ್ಟು ನನ್ನ ಜುಟ್ಟಿನ ಮೇಲೆ ತಿರುಗಿದೇಂತ ಹೇಳಬಹುದು........"

" ಅಂತೂ ಅವನನ್ನ ಕಾಡಿಸಿದಿರೀನ್ನಿ........"

" ಅಂಥ ಇಂಥ ಕಾಡೋದಲ್ಲ........ಜನ್ಮೇಪಿ ಮರಿಲಾರ ಪಾಪಣ್ಣ ಅದನ್ನ........ಲಂಕಾದಹನದಲ್ಲಿ ನಾನು ರಾವಣ ಅವನು ರಾಮ. ಅವನ ರಖಾವು ಚಂದ್ರಾದೇವಿನೆ ಸೀತೆ. ಅವಳನ್ನು ಹೊತ್ತು ತರುವ ಸೀನಿನಲ್ಲಿ ರಾಮ ಅನ್ನೋ ಬದಲು ಪಾಪಣ್ಣಾಂತ ಸಂಭೋದಿಸಿ ಬೈದು ಕಡೆ ಯುದ್ಧದ ಸೀನಿನಲ್ಲಿ ನಿಜವಾಗಲೂ ಪಾಪಣ್ಣನ ಎದೆಗೇ ಗುರಿಯಿಟ್ಟು ಬಾಣ ಬಿಟ್ಟು ' ಅಯ್ಯೋ ' ಅನ್ನಿಸಿದೆ........ಆಯ್ತು."

" ಭೇಷ್ ಚೆನ್ನಾಗಿ ಮಾಡಿದಿರಿ. ಆ ಮೇಲೆ ! .. ...."

" ಅದೇ ನನಗೂ ಕಂಪನಿಗೂ ಋಣಾನುಬಂಧ ತಪ್ಪಿಸಿದ್ದು. ಕೃಷ್ಣ ಲೀಲೆಯಲ್ಲಿ ಪಾಪಣ್ಣನೇ ಕೃಷ್ಣ ನಾನು ಕಂಸ, ಕೇಳಬೇಕೆ ಮಲ್ಲಯುದ್ಧ ! " ಎಲವೋ ದನಕಾಯುವವನೆ– ಎಲವೊ ಕಳ್ಳ " ಎಂದು ಬೈದು ಅವನೊಡನೆ ಕಾಳಗಕ್ಕೆ ಪ್ರಾರಂಭಿಸಿದೆ. " ಎಲವೊ ಗಂಟು ಕಳ್ಳ—ಇದೋ ನಿನಗೆ ತಕ್ಕ ಶಾಸ್ತಿ" ಎಂದು ಪಕ್ಕೆ ಕಟ್ಟಿ ಬಲವಾಗಿ ಗುದ್ದಿ ಬಿಟ್ಟೆ. ಪಾಪಣ್ಣ ತತ್ತರಿಸಿಹೋದ.

ಮೂರ್ಛೆ ಹೋಗೋ ಪರಿಸ್ಥಿತಿ. ಆಗ ಮೆಲ್ಲಗೆ ನನ್ನನ್ನ ಸಂಹರಿಸುವಂತೆ ಬಳಿ ಸಾರಿ ಕಿವಿಯಲ್ಲಿ "ಬಂಗಾರು ಬಿದ್ದು ಬಿಡು ದಮ್ಮಯ್ಯ ಸತ್ತು ಬಿಡು ಖಂಡಿತ ಆಟ ಮುಗಿದ ಮೇಲೆ ಸಂಬಳ ಕೊಟ್ಟುಬಿಡುವೆ" ಎಂದು ಅಂಗಲಾಚಿದ. ಮರುಕಗೊಂಡು ಹಾ! ಎಂದು ಬಿದ್ದದ್ದಾಯಿತು........"

"ಮರು ದಿನ ನಿಮ್ಮ ಸಂಬಳ ಸಂದಾಯವಾಗಿರಬೇಕಲ್ಲವೆ?"

"ಬೇವಾರ್ಸಿ ಪಾಪಣ್ಣ—ಅವನು ಮೂಡ್ತಾನ! ಹೊತ್ತು ಬಂದಾಗ ಹಲ್ಲುಗಿರಿಯೊ ಗೂಬೆ ಅವನು. ಮತ್ತೆ ಯಥಾ ಪ್ರಕಾರ ಚಂದ್ರಾದೇವಿ ಜೊತೆಗೆ ಚಕ್ಕಂದ ಆಡೋದರಲ್ಲೆ ಆಯ್ತಲ್ಲದೆ ಇದೇ ಕಂಪನಿಯ ಶಮಂತಕ ಬಂಗಾರಯ್ಯನ ಸಂಬಳದ ವಿಷಯ ನೆನಪಿಗೆ ಬರಲಿಲ್ಲ. ನಾನು ಕೇಳೋನೆ? ....ಆವತ್ತು "ಪ್ರಹ್ಲಾದ ಚರಿತ್ರೆ" ನಾಟಕ ಅಭಿನಯ ಭಯಂಕರ ಬಂಗಾರಯ್ಯನವರ ಹಿರಣ್ಯಕಶಪು ಪಾತ್ರ ನೋಡಲು ಮರಿಯಬೇಡಿ ಅಂತ ಸಾರಿದ್ದರು. ಥೇಟರು ತುಂಬಿ ತುಳಕ್ತಾ ಇದೆ. ಹತ್ತು ರೂಪಾಯಿಂದ ನಾಲ್ಕಾಣೆ ಕ್ಲಾಸಿನ ತನಕ ಎಲ್ಲಾ ಸೀಟು ಭರ್ತಿ. ಪಾಪಣ್ಣನೇ ಪ್ರಹ್ಲಾದನ ಪಾರ್ಟು. ಚಂದ್ರಾದೇವಿ ಖಯ್ಯಾದು. ಕೇಳಬೇಕೆ ನಾನು ಇನ್ನೇನು ಘರದೆ ಏಳಬೇಕೂ ಅನ್ನೊ ಸಮಯಕ್ಕೆ ರೇಗಿ ಕಿರೀಟ ಬಿಸಾಕಿ ಮೀಸೆ ಹುರಿ ಕೆದರಿ "ಪಾಪಣ್ಣ ಸಂಬಳ ಕೊಟ್ರೆ ನಾನು ಕಿರೀಟಕಟ್ಟೋದು" ಎಂದು ರೇಗಿ ಬಿದ್ದೆ. ಅವನು ಕಾಲಿಗೆ ಬಿದ್ದು "ಬಂಗಾರು ನಾಟಕ ನಡೆಸಿ ಕೊಡು ಶ್ರೀಹರಿ ಆಣೆ ನಿನ್ನ ಸಂಬಳದ ಜೊತೆಗೆ ನೂರು ಸಂಭಾವನೆ ಕೊಡ್ತೇನೆ" ಎಂದು ಬೇಡಿದ. ನಾನು ಆರುವರಡಿ ಎತ್ತರ ೨೫೦ ಪೌಂಡು ತೂಕದ ಆಳಾದರೂ ಮಗುವಿನ ಹೃದಯ ನಂದು. ಛಿ! ಪಾಪ ಎಂದು ಕಿರೀಟ ಕಟ್ಟಿಕೊಂಡು ಸಿಂಹಾಸನ ಏರಲು ಸಿದ್ಧನಾದೆ. ....ಆದರೂ ನಾಟಕ ಪ್ರಾರಂಭವಾಗಿ ಮುಗಿಯುವ ಹೊತ್ತು ಬಂದಂತೆ ಮತ್ತೆ ಪಾಪಣ್ಣನ ಅಹಂಕಾರ ತಲೆಹಾಕಲು ಪ್ರಾರಂಭಿಸಿತು. ಪ್ರಹ್ಲಾದನಿಗೆ ವಿಷ ಕೊಟ್ಟು ಕೊಲ್ಲು ಎಂದು ಖಯಾದೂ ಕೈಹಿಡಿದು ಹೇಳಿದ್ದು ತಪ್ಪೂಂತ ಗ್ರೀನ್ ರೂಮ್‌ನಲ್ಲಿ ಬೈದ ಅವನ ಚಂದ್ರಾನ್ನ ಯಾರೂ ಮುಟ್ಟಿ ಬಾರದೂಂದ್ರೆ ಮನೆಲಿಟ್ಟುಕೊಳ್ಳಿ ನಾಟಕದಲ್ಲಿ ನನ್ನ ರಾಣೀಂತ ಮಾಡಿದ ಮೇಲೆ ರಾಜ ಹಿರಣ್ಯಕಶಿಪು ಯೋಗ್ಯತೆಗೆ ತಕ್ಕಹಾಗೆ ನಾನು ಪಾರ್ಟು ಮಾಡಬೇಕೋ ಬೇಡವೊ?........"

"ಸರಿಯೆ......ನೀವು ಹೇಳೋದು......."

"........ಕಡೇ ದೃಶ್ಯ. ಕಂಭ ಸೀಳಿ ನರಸಿಂಹ ಪ್ರತ್ಯಕ್ಷನಾಗೋ ಸೀನು. ಪಾಪಣ್ಣ ಪ್ರಹ್ಲಾದನಾಗಿ ನಿಂತಿದ್ದಾನೆ. ನಾನು ಕಿಡಿ ಕಿಡಿಯಾದ ಹಿರಣ್ಯ

……. " ಎಲವೊ ಉಂಡ ಮನೆಗೆ ಎರಡು ಬಗೆವ ಭಂಡ ಎಲ್ಲಿರುವನೊ ನಿನ್ನ ಶ್ರೀಹರಿ … ತೋರಿಸು……. " ಎಂದು ಆ ಪಿಶಿನಿಯನ್ನು ಪೀಡಿಸಿದೆ. ಧಾಣ ಧಡಿಯ ವಯಸ್ಸಾಗಿದ್ದರೂ ಕುಳ್ಳ ದೇಹ ಕೀರಲು ಧ್ವನಿಯ ಪಾಪಣ್ಣ "… …. ಜನಕನೆ ಶ್ರೀಹರಿಯು ಎಲ್ಲೆಲ್ಲೂ ಇರುವನು……." ಎಂದು ಕಿರಲು ವಾಣಿಯಲ್ಲಿ ಹೇಳಿದ. "……. ಜನಕನೆ….. ಎನ್ನು ವೆಯಾ ಕನಕ ಬಚ್ಚಿಟ್ಟ ಪಾಪಿ…….." ಎಂದು ಹೇಳೇಬಿಟ್ಟೆ. ಪಾಪಣ್ಣ ಅವಾಕ್ಕಾದ. ಇದೇನು ಹೀಗೆ ಮಾತಾಡು ತ್ತಿದ್ದಾನಲ್ಲಾಂತ ಹೆದರಿದ ರಂಗಮಂಟಪದಲ್ಲಿ ಏನು ಮಾಡೋಹಾಗಿದ್ದಾನೆ ಆ ಮಗ !… … ನಾನು ಮತ್ತೆ " ಎಲ್ಲಿರುವನೋ ನಿನ್ನ ಆ ಹರಿ ಭಡವ…….. ಹೇಳು " ಎಂದು ಅವನ ಕತ್ತಿನ ಹಿಂಬದಿ ಹಿಡಿದು ಹಿಂಡಿದೆ., ನೋವು ತಡಿಯ ಲಾರದೆ ಕಣ್ಣು ಮುಚ್ಚಿ " ಶ್ರೀಹರಿ ಶ್ರೀಹರಿ ಶ್ರೀಹರಿ " ಎಂದು ಪ್ರಾರ್ಥನೆ ಮಾಡಿದ ಆ ಪಾಪಿ. ನಾನು " ನೀನು ನನ್ನ ಮಗ— ನನ್ನ ಇಚ್ಛೆಯಂತೆ ನಡೆ ಶ್ರೀಹರಿ ನಿನ್ನ ಕಾಪಾಡಲಾರ ಮತ್ತೆ" ಶ್ರೀಹರಿ ಎಂದರೆ ಕೊಂದುಬಿಡುವೆ…….. ಕೊಡುವ ದುಡ್ಡು ಎಣಿಸಿಬಿಡು .. .." ಎಂದು ಧಟಕ್ಕನೆ ಬಾಯಿಂದ ಬಂದು ಬಿಟ್ಟಿತು. " ಹರಿ— ನಾರಾಯಣ " ಎಂದು ಗಾಬರಿಯಿಂದ ನನ್ನ ಕಾಲಿಗೆ ಬಿದ್ದ. " ಕಡೇ ಸೀನೂಂತ ಹೇಳಿದೆನಲ್ಲಾ— ರಂಗದ ಮಧ್ಯದಲ್ಲಿ ದೊಡ್ಡ ಕಂಭ ಅದರ ಹಿಂದೆ ನರಸಿಂಹ ಅಡಗಿ ನಿಂತಿದ್ದಾನೆ. ಅದೇ ತರಹದ ಚಿಕ್ಕ ಕಂಭಗಳೂ ಅಲ್ಲಲ್ಲಿ ಇದ್ದವು. ಬಹಳ ರಮ್ಯವಾದ ದೃಶ್ಯ ಅದು. ನಾನು " ಎಲವೋ ಭಂಡ ಎಲ್ಲಿರುವನೋ ನಿನ್ನ ಹರಿ… ಬೊಗಳು " ಎಂದು ಕತ್ತಿ ಝಳಪಿಸಿದೆ. ಅವನು ಬಾಯಿ ಬಾಯಿ ಬಿಡುತ್ತ "ಎಲ್ಲೆಲ್ಲೂ ಇರುವನು— ಅವನು ಸರ್ವಾಂತರ್ಯಾಮಿ ಜನಕನೇ… "ಎಂದ. ನಾನು—"ಇಲ್ಲಿ ಈ ಕಂಭದಲ್ಲಿ ಇರುವನೋ ? " ಎಂದು ಒಂದು ಕಂಭ ತೋರಿಸಿ ಕೇಳಿದೆ. " ಅಲ್ಲೂ ಇರುವನು " ಎಂದ. ಕಡೆಗೆ ನರಸಿಂಹ ಅಡಗಿದ್ದ ಕಂಭದ ಪಕ್ಕದ ಕಂಭ ತೋರಿಸಿ—" ಇದನ್ನು ಈ ಖಡ್ಗ ದಿಂದ ಸೀಳುವೆ ಅಲ್ಲಿ ತೋರಿಸುವೆಯಾ ನಿನ್ನ ಶ್ರೀಹರಿಯನ್ನು—" ಎಂದು ಕೈಲಿದ್ದ ಖಡ್ಗ ಎತ್ತಿ ಆ ಕಂಭ ಸೀಳಲು ಹೋದೆ. ಆಗ ಪ್ರಹ್ಲಾದ ಪಾಪಣ್ಣ ಕೈ ಮುಗಿದು " ತಂದೆ ತಾಳು ಖಡ್ಗದಿಂದ ಈ ಕಂಭವನ್ನು ಸೀಳು ಶ್ರೀಹರಿ ಇರುವನು " ಎಂದು ಮಧ್ಯದ ನರಸಿಂಹ ಇದ್ದ ಕಂಭ ತೋರಿಸಿದ. ನಾನು ಬಿಟ್ಟೇನೇ" .. ಮಗನೇ ಆ ಕಂಭ ಬೇಡ ಇದೇ ಕಂಭದಲ್ಲಿ ತೋರಿಸು ನಿನ್ನ ದೇವ ದೇವನನ್ನು ಇಲ್ಲದಿದ್ದರೆ ನಿನ್ನ ಶಿರವನ್ನು ಈಗಲೇ ಹಾರಿಸಿಬಿಡುವೆ " ಎಂದು ಅವನ ಜುಟ್ಟು ಹಿಡಿದು ಎಳೆದು ಅಲ್ಲಾಡಿಸಿದೆ. . "

" ಹ್ಹಹ್ಹಹ್ಹ ಚೆನ್ನಾಗಿ ಮಾಡಿದಿರಿ… ಆ ಮೇಲೆ ?.. "

" ....ಆಮೇಲೇನು—ಪಾಪಣ್ಣ ಕಣ್ಣೀರು ಸುರಿಸುತ್ತ . ಶ್ರೀಹರಿ ಹರಿ ಎಂದೆನ್ನುತ್ತಾ...."ತಂದೆಯೋ ಆ ಕಂಭ ಬೇಡ ಈ ಕಂಭವನ್ನು ಸೀಳಿರಿ – ನಿಮ್ಮ ದಮ್ಮಯ್ಯ ..."ಎಂದ. ನಾನು ಬಿಡಬೇಕಲ್ಲಾ—"ಸುಳ್ಳುಕಳ್ಳ ಮುಡಿಯು ಮುಠಾಳ ತೋರಿಸು ನಿನ್ನ ಹರಿಯನ್ನು ಈ ಕಂಭದಲ್ಲಿ—" ಎಂದು ಕತ್ತು ಹಿಸುಕಿದೆ. ಕೋಪದಲ್ಲಿ ಘಡಘಡಾ ಎಂದು ಕಂದಾ ಹಾಡುತ್ತಾ ಅವನ ಕೈ ಹಿಡಿದು ಗರಗರನೆ ತಿರುವಿದೆ. ಗೊಳೋ ಎಂದು ಅತ್ತ. ಮೆಲ್ಲಗೆ ಸೈಡ್‌ವಿಂಗ್‌ನಲ್ಲಿ ನುಸುಳಿ ಮ್ಯಾನೇಜರ್ ಹತ್ತಿರ ಕಂತೆ ನೋಟು ತೆಗೆದುಕೊಂಡು ನಾನು ಕಂದ ಹಾಡಿ ಮುಗಿಸುವುದರಲ್ಲಿ ಅವನೂ ಬಂದ—" ತಂದೆಯೋ ಶ್ರೀಹರಿ ಲಕ್ಷ್ಮೀಸಮೇತ ಇಲ್ಲೇ ಇರುವನು—" ಎಂದು ಕಂತೆ ನೋಟನ್ನು ನನಗೆ ಮರೆಯಾಗಿ ಕೊಟ್ಟ. ಆ ಮೇಲೆ ನರಸಿಂಹ ಅಡಗಿದ್ದ ಕಂಭವನ್ನೇ ಸೀಳಿ ಮಂಗಳ ಹಾಡುವಂತೆ ಮಾಡಿದೆ. ಇಷ್ಟರೊಳಗಾಗಿ ಪ್ರೇಕ್ಷಕ ತಂಡದಿಂದ ಕೊಳೆತ ಮೊಟ್ಟೆಯಿಂದ ಹಿಡಿದು ಹಳೆಯ ಮೆಟ್ಟಿನವರೆಗೆ ಎಲ್ಲಾ ರಂಗವನ್ನು ತುಂಬಿತ್ತು—"

" ದೊಡ್ಡ ಚರಿತ್ರೆ ಅಂ " " ದುಡ್ಡು ಎಣಿಸಿದೆ ಐನೂರಿತ್ತು. ಅದೇ ಕಡೆ ನಾಟಕ. ಸೀದ ಇಲ್ಲಿಗೆ ಬಂದೆ ...ಸಾಕು ಈ ನಾಟಕ. ಕುಪ್ಪ ಕೆತ್ತಿಬಿಡು ಈ ಕ್ರಾಪಿನ ಕೆಲಸ ಆಯಿತು. " ತೃಪ್ತಿಯಿಂದ ಕುಪ್ಪುಸ್ವಾಮಿ ಮಂಗಳವಾರ ವಾದರೂ ಮಸೆದ ಕತ್ತಿಯಿಂದ ತುಂಬಿದ ತೋಟದಂಥಹ ಆ ಹೀರೋ ಕ್ರಾಪನ್ನು ನೀರು ಸವರಿ ನುಣ್ಣಗೆ ಕೆತ್ತಿ ಮಾವಿನವಾಟಿ ತಿಕ್ಕೇಬಿಟ್ಟ.

" ಮುಂದೇನು....ಎಂದೆ ನಾನು - "

" ನೂರು ರೂಪಾಯಿ ಅಡ್ವಾನ್ಸು ಕೊಟ್ಟು ಒಂದು ಅಂಗಡಿ ಹಿಡಿದಿದ್ದೇನೆ ಹಾಯಾಗಿ ರಾಮಕೃಷ್ಣಾಂತ ವ್ಯಾಪಾರ ಮಾಡಿಕೊಂಡು ಕಾಲ ಹಾಕ್ತೀನಿ .. " ಎಂದು ಟೌಲಿನಿಂದ ಮೈಮೇಲಿನ ಕೂದಲು ಕೊಡವಿಕೊಂಡು "ಬರ್ತೀನೆ... " ಎಂದು ಹೊರಬಿದ್ದ ಬಂಗಾರಯ್ಯ.

ನಾನು ಕುಪ್ಪುಸ್ವಾಮಿನ ನೋಡಿದೆ ಅವನು ನನ್ನ ನೋಡಿ ನಕ್ಕ.

॥ ನಟರಾಜಾಯಃನಮಃ ॥

ದಾಶರಥಿ ದೀಕ್ಷಿತ್.

— o —

ಒಂದೇ ದಾರಿ !

ಕೊರವಂಜಿ ಸಂಪಾದಕರಿಗೆ

ಸ್ವಾಮಿ,

ನಾನು ರಾಜೀವ ಪುರದಿಂದ ನಿಮ್ಮ ಊರಿಗೆ ಕಾರ್ಯಾರ್ಥಿಯಾಗಿ ಹೋದ ವಾರ ಬಂದಿದ್ದೆ. ದೊಡ್ಡ ಊರು, ಎಲ್ಲಾ ಕಡೆಗಳಲ್ಲೂ ಸುತ್ತಬೇಕಾದರೆ ಜಟಕಾ ಬಾಡಿಗೆ ಹೆಚ್ಚಾಗಬಹುದು ಎಂದು ಒಂದು ಬೈಸಿಕಲ್ ಬಾಡಿಗೆಗೆ ಗೊತ್ತುಮಾಡಿ ಕೊಂಡೆ. ಆ ಬೈಸಿಕಲ್ ಹತ್ತಿ ಬೆಳಗ್ಗೆ ಹೊರಟಿದ್ದೇ ತಡ ನೋಡಿ ಆ ರಸ್ತೆಯ ತುದಿಯಲ್ಲೇ ಒಬ್ಬ ಪೋಲೀಸಿನವ ಈ ರಸ್ತೇಲಿ ಹೋಗಬಾರದು 'ಒಂದೇ ದಾರಿ' ಆ ರಸ್ತೆಯಲ್ಲಿ ಹೋಗಿ ಎಂದ. ಆ ರಸ್ತೆಯಲ್ಲಿ ಹೋದರೆ ಈ ರಸ್ತೆ ತುದಿಯಲ್ಲಿ ರುವ ಅಂಗಡಿ ಹೇಗಯ್ಯಾ ಸಿಗುತ್ತೇ ಎಂದೆ. ಅದೆಲ್ಲಾ ನಮಗೆ ಗೊತ್ತಿಲ್ಲ. ಈ ರಸ್ತೆಯಲ್ಲೇ ಹೋಗಿ, ಅಲ್ಲಿ ಯಾರನ್ನಾದರೂ ಕೇಳಿ ಅಂದ. ಇಷ್ಟು ಸಹಾಯ ಮಾಡಿದನಲ್ಲ ! ಪ್ರಜಾ ಪೋಲೀಸಿನವ ಅಂತ ಆ ರಸ್ತೆಯಲ್ಲೇ ಹೋದೆ. ಅದು ಕವಲೊಡೆಯುವ ಕಡೆ ಇನ್ನೊಬ್ಬ ಪೋಲೀಸಿನವ. ಅವನನ್ನು ಕೇಳಿದೆ, ಯಾವ ರಸ್ತೆಯಲ್ಲಿ ಹೋಗಲಿ ಅಂತ. ಅವನು ಬಲಗಡೆ ಬೀದಿ ತೋರಿಸಿದ. ಥನ್ಕ್ಯೂ ಸ್ಮಿ, ಅಂತ ಬಲಗಡೆ ತಿರುಗಿದೆ. ಮುಂದೆ ಸಿಕ್ಕ ಸರ್ಕಲಿನಲ್ಲಿ ಮೂರು ಜನ ಪೋಲೀ ಸರು ಒಟ್ಟು ಕಾಯುತ್ತಿದ್ದರು. ಕಾರಣ, ಇಲ್ಲಿ ವಾಹನ ಸಂಚಾರ ಅಧಿಕವೇನೋ ಅಂದುಕೊಂಡೆ. ಮೂವರು ಒಂದೊಂದು ದಾರಿ ತೋರಿಸಿದರು. ಅವರು ತೋರಿಸಿದ ಒಂದು ರಸ್ತೆಯಲ್ಲಿ ಒಂದು ಜೀಪು ಹಾರುತ್ತಿತ್ತು. ಇನ್ನೊಂದು ರಸ್ತೆಯಲ್ಲಿ ಎರಡು ಜಟ್ಕಾಗಳು ಪಂದ್ಯ ಓಡುತ್ತಿದ್ದುವು. ಇವೆರಡನ್ನೂ ನೋಡಿದ ಮೇಲೆ ಮೂರನೆಯ ರಸ್ತೆಯನ್ನೇ ಹಿಡಿದೆ. ಅದು ನೇರನೆ ಮಾರ್ಕೆಟ್ಟಿಗೆ ತಂದುಬಿಡುತು. ಅಷ್ಟುಹೊತ್ತಿಗೆ ಹೊರಟು ಮೂರು ಘಂಟೆ ಆಗಿತ್ತು. ಹತ್ತಿರದ ಸೋಡಾ ಅಂಗಡೀಲಿ ಒಂದು ಧಂಡಾ ಕಲರ್ ಕುಡಿದು ತಿರುಗಿ ಹೊರಟೆ. 'ಒಂದೇ ದಾರಿ' ಅಂತ ಕೈಮರ ತೋರಿಸಿದಕಡೆ. ಕಡೆಗೆ ಮಧ್ಯಾಹ್ನ ಮೂರು ಗಂಟೆ ಹೊತ್ತಿಗೆ ನನಗೆ ಬೇಕಾದ ಅಂಗಡಿ ಸಿಕ್ಕಿತು. ಅವರು ಬಾಗಿಲು ಬಂದು ಮಾಡಿ ಊಟಕ್ಕೆ ಅಂತ ಹೊರಟುಹೋಗಿದ್ದರು. ಅಲ್ಲೇ ಒಂದು ಕಾಗದವನ್ನು ಬರೆದಿಟ್ಟು ಬಾಗಿಲ ಸಂದಿಯಲ್ಲಿ ತೂರಿಸಿ ತಿರುಗಿ ಹೋಟಲಿಗೆ ಹೋಗಿ ಊರಿಗೆ ಬಂದೆ.

ನೀವು ಊರಿನಲ್ಲಿ ಸುತ್ತಾಡುವವರು. ನಿಮಗೆ ಈ 'ಒಂದೇ ದಾರಿಯ' ಮರ್ಮ ಅರ್ಥವಾಗಿರಬಹುದು, ಸ್ವಲ್ಪ ತಿಳಿಸುತ್ತೀರಾ? ನಾನು ಹೋದ 'ಒಂದೇ ದಾರಿ' ಗಳಲ್ಲಿ ಎಲ್ಲೂ ಗಲಾಟೆಯೇ ಇತ್ತಿಲ್ಲ. ಅಲ್ಲಲ್ಲಿ ಹೆಜ್ಜೆಹೆಜ್ಜೆಗೆ ನಿಂತಿದ್ದ ಪೋಲೀಸಿನವರನ್ನು ಬಿಟ್ಟರೆ ಜನಸಂದಣಿಯೇ ಇರಲಿಲ್ಲ. ಅಂತಹ ರಸ್ತೆಗೆ 'ಒಂದೇ ದಾರಿ' ಹಾಕಲು ಕಾರಣವೇನು. ರಸ್ತೆ ತುದಿಯಲ್ಲಿ ಆಸ್ಪತ್ರೆಗಳಿವೆಯೇ? ಅಥವಾ ಸೆರೆಮನೆಗಳಿವೆಯೇ, ಅಥವಾ ಸನ್ಯಾಸಿಗಳ ಮಠಗಳಿವೆಯೇ?

ಅಥವಾ ಆ ರಸ್ತೆಯಲ್ಲಿ ಅಂಗಡಿ ಇಟ್ಟಿರುವವರು ರಾಜಕೀಯದಲ್ಲಿ ಬೇರೆ ಪಂಗಡಕ್ಕೆ ಸೇರಿದವರೇ? ರಾಜಕೀಯದ ಸವತಿಮತ್ಸರಕ್ಕಾಗಿ ಅವರ ವ್ಯಾಪಾರ ವನ್ನು ಮುರಿದು ಹಾಕಲು ಈ ರೀತಿ ಏರ್ಪಾಡಿರಬಹುದೇ?

ಅಲ್ಲದೇ—ಬೇಕಾದವರ ಅಂಗಡಿಗಳು ಬೇರೆ ರಸ್ತೆಯಲ್ಲಿವೆ ಅಲ್ಲಿ ವ್ಯಾಪಾರ ಹೆಚ್ಚಾಗಲೀ ಅಂತ ಅಲ್ಲಿ ಎರಡೂದಾರಿ ಉಂಟು ಮಾಡಿ, ಬೇಡದವರ ಅಂಗಡಿ ಗಳ ರಸ್ತೆಯನ್ನು 'ಒಂದೇ ದಾರಿ' ಮಾಡಿರಬಹುದೇ?

ಸಾರ್ವಜನಿಕ ಪತ್ರಿಕೆ, ಸಾರ್ವಜನಿಕ ಕಾರ್ಯದಲ್ಲಿ ಉದ್ಯುಕ್ತರಾದವರು ನೀವು ಇದನ್ನೆಲ್ಲಾ ಕೂಲಂಕಷವಾಗಿ ವಿಚಾರಿಸಿ ನಮಗೆ ತಿಳಿವು ಕೊಡುತ್ತೀರಾ? ಇದು ಮುಗಿಯುವ ಸಂಭವಇದೆಯೇ?

ನಿಮ್ಮವ.
ರಾ ಪು. ಶೇಷಯ್ಯ.

* * * *

ಅಯ್ಯಾ! ಶೇಷಯ್ಯಾ!

ಗೇಣುದ್ದ ಹೊಟ್ಟೆಗಾಗಿ ದುಡಿಯುವ, ಅದನ್ನೂ ಚೋಟುದ್ದ ತುಂಬಲೂ ಆಗದ ಪತ್ರಿಕೋದ್ಯೋಗಿಯನ್ನ ವಿವರಣೆ ಕೇಳಿದ್ದೀಯಲ್ಲಾ! ಇದಕ್ಕೆ ನಗಲೇ! ಅಳಲೇ!

'ಒಂದೇ ದಾರಿ' ಅಂದರೆ ಅವರವರ ಮೂಗಿನ ನೇರಕ್ಕಿರುವುದೇ 'ಒಂದೇ ದಾರಿ' ಬೇರೆ ಮರ್ಮ ಏನು ಬಂತು ಇದರಲ್ಲಿ! ಏನಾದರು ಪ್ಲಾನ್ ಉಂಟೋ—ಯೋಚನೆ ಇದೆಯೋ ಈ 'ಒಂದೇ ದಾರಿಯ' ಹಿಂದೆ ಎಂದು ನೀವು ಕೇಳ ಬಹುದು. ಇದ್ದೇ ಇರುತ್ತದೆ. ಅದೆಲ್ಲಾ ಕತೆಗಳಲ್ಲಿ ಕಂಡೇ ಬರುತ್ತವೆ. ವರ್ಗಾ ವರ್ಗ ಆಗುವತನಕ ಈ 'ಒಂದೇ ದಾರಿ' ಮುಗಿಯುವಂತಿಲ್ಲ. ಅಲ್ಲಿನ ತನಕ ನಮ್ಮೂರಿಗೆ ಬರದೇ ಇದ್ದರೆ ಎಲ್ಲವೂ ಸುಖ.

ನಿಮ್ಮವನೇ ಆದ ಈ ಊರಿನಲ್ಲೇ ಇರಬೇಕಾದವನ
ವಿನಂತಿಗಳು,

" ಕನಸಿನಳಗೊಂದು ನನಸು ".

ಶನಿವಾರ ! ಕಛೇರಿ ಮುಗಿಸಿಕೊಂಡು, ಸಾಹೇಬರ ಮನೆಗೆ ಎಳೆನೀರು ಕೊಟ್ಟುಬಿಟ್ಟು ನಮ್ಮನೇಗೆ ಬರೋ ಹೊತ್ತಿಗೆ, ಬನಿಯನ್ನು ಮೈಗೆ ಅಂಟಿ ಕೊಂಡಿತ್ತು- ಮಧ್ಯಾಹ್ನ ಮೂರಾದರೂ ಆಗಲಿ ಸ್ನಾನ ಮಾಡಿ, ಶುಭ್ರವಾಗಿ ಊಟಮಾಡೋಣ ಇದ್ದ ಗಂಜಿಯನ್ನ, ಅಂತ ಬೇಗ ಟವಲು ತೆಗೆದುಕೊಂಡು — ಬಚ್ಚಲಮನೆ ಕಡೆ ಹೊರಟೆ.

' ನೀರು ನಿಂತು ಹೋಗಿದೆ ಅಂದ್ರೆ' ಅಂತ ಶಕುನ ನುಡಿಯಿತು.

ಒಂದು ಚೊಂಬು ನೀರಿನಲ್ಲಿ ಟವಲು ಒದ್ದೆ ಮಾಡಿ ಮೈ ಒರಸಿಕೊಂಡು ಊಟಕ್ಕೆ ಕುಳಿತು, ಅಂಬಲಿ ಕುಡಿದು ತುಂಬೇ ಸೊಪ್ಪು ತಿಂದು, ಬಂದು ಹಜಾರದಲ್ಲಿ ಕುಳಿತೆ, ದೈನಂದಿನ ಪತ್ರಿಕೆ ಓದಲು.

ಮೊದಲನೇ ಕಲಂಮಿನಲ್ಲಿ ಲಕ್ಷ್ಮಣತೀರ್ಥದಲ್ಲಿ ತೀರ್ಥ ಬಂದಹಾಗೆ ನೀರು ಬರುತ್ತಿದೆ. ಕಾವೇರಿಯಲ್ಲಿ ಅದೂ ಇಲ್ಲ. ಕನ್ನಂಬಾಡಿ ಕಟ್ಟೆ ಬೆತ್ತಲೆ ನಿಂತಿದೆ. ಅದರಿಂದ ಶಿವನಸಮುದ್ರ ಇಂಗಿ ಹೋಗಿದೆ ಅಂದರೆ ಶಿವನ ವಿದ್ಯುಚ್ಛಕ್ತಿ ಅರ್ಧ ಭದ್ರ. ಆದ್ದರಿಂದ ನೀರು ಸರಬರಾಜು ಅರ್ಧ ಖೋತಾ. ಅಂತ ವಾರಣವಾಗಿ ಬರೆದಿತ್ತು.

ಎರಡನೆ ಕಲಂಮಿನಲ್ಲಿ ಭವಿಷ್ಯ ಹೇಳಿತ್ತು. ಭರಣೀ ಮಳೆ ಧರಣೀನ ಗುಡುಗಿಸುತ್ತೆ. ಕೃತ್ತಿಕೆ ಮಳೆ ಸಾಗರ ಸಮುದ್ರಗಳನ್ನು ತುಂಬಿಸುತ್ತೆ ಅಂತ. ಹಿರಿಯರು ಹೇಳಿದ ಭವಿಷ್ಯ ಸುಳ್ಳಾಗುತ್ತ್ಯೇ ?

ಅಷ್ಟು ಹೊತ್ತಿಗೆ ರ್ಘೋಂಪು. ಹಾಗೆ ಚಾಪೆ ಮೇಲೆ ಮಲಗಿದೆ.

ಮೇ ಹನ್ನೊಂದಕ್ಕೆ ಕೃತ್ತಿಗೆ ಮಳೆ ಶುರುವಾಗಬೇಕು, ಈ ಕ್ಯಾಲೆಂಡರು ಗಳು ಈಗಿನ ಕಾಲದಲ್ಲಿ ಸತ್ಯ ಆಡುವುದಾದರೆ—ಅಲ್ಲಿಂದ ಒಂದು ತಿಂಗಳು ಸುಮಾರು ಸಾಗರ ಸಮುದ್ರ ತುಂಬುವಷ್ಟು ಜಲಪ್ರವಾಹ. ಅಂದ ಮೇಲೆ ನಾನು ಕಛೇರಿಗೆ ಹೋಗಿ ಬರುವುದು ಹೇಗೆ. ಆಫೀಸರ ಮನೆಗೆ ತರಕಾರಿ ಸರಬರಾಜು ಮಾಡುವುದು ಹೇಗೆ ? ಅದೂ ಹೊತ್ತಿಗೆ ಸರಿಯಾಗಿ ಮಾಡುವುದು ಹೇಗೆ ? ಇವೆಲ್ಲಾ ಯೋಚನೆಗೆ ಇಟ್ಟುಕೊಂಡಿತು. ಆಗ ಒಬ್ಬ ಯಕ್ಷನು ನನ್ನೆದುರಿಗೆ ಬಂದು. " ಅಯ್ಯಾ ! ಇದಕ್ಕೇಕೆ ಯೋಚನೆಮಾಡುತ್ತೀ ಒಂದು

ಲಕ್ಷಣವಾದ ಭದ್ರವಾದ ಕರೀ ಛತ್ರಿಯನ್ನು ಕರೀಸಂತೆಯಲ್ಲಿ ಕೊಂಡುಕೊ ನಿನ್ನ ಸಮಸ್ಯೆಗಳೆಲ್ಲಾ ನಿವಾರಣೆಯಾಗುತ್ತವೆ" ಎಂದು ಯಕ್ಷಗಾನ ಹಾಡಿದ. ಭೆಲೆ; ಭೇಷ್ ಎಂದೆ ಕನಸಿನಲ್ಲನ್ನುವಂತೆ.

ಬೆಳಗಾಗುತ್ತಲೂ ಸೇಟ್ ಧನಮಲ್ ಹತ್ತಿರ ಹೋಗಿ ನನ್ನ ಮಾವ ಕೊಟ್ಟಿದ್ದ ಬೆಳ್ಳಿ ಹಿಡಿಯ ವಾಕಿಂಗ್ ಸ್ಟಿಕ್ಕನ್ನ ಗಿರವಿ ಇಟ್ಟು ಎಂಟು ರೂಪಾಯಿ ಸಾಲ ತಂದು, ಜಿಂಕೆ ಮಾರ್ಕು, ಕುದುರೆ ಮಾರ್ಕು, ಹುಲಿ ಮಾರ್ಕು, ಸಿಂಹದ ಮಾರ್ಕು ಹೀಗೆ ಛತ್ರಿ ಯಾವ ಪ್ರಾಣಿ ಉಪಯೋಗಿಸುವುದಿಲ್ಲವೋ ಆ ಪ್ರಾಣಿಗಳ ಮಾರ್ಕುಗಳನ್ನುಳ್ಳ ಛತ್ರಿಗಳನ್ನೆಲ್ಲಾ ನೋಡಿದೆ. ಕಡೇಗೆ ನಾಯಿ ಕೊಡೆ ಮಾರ್ಕಿದ್ದ ಥಳಥಳ ಅಂತ ಕಪ್ಪು ಕಣ್ಣಿಗೆ ಹಚ್ಚಿದಂತಾಗುತ್ತಿದ್ದ ಒಂದು ಛತ್ರಿಯನ್ನು ಚೌಕಾಶಿ ಮಾಡಿ ಕೊಂಡು ಕೊಂಡೆ. ಅದೆಂತಹ ಹಿಡಿ ಅಂತೀರಿ ಅದಕ್ಕೆ ಈ ಕಡೆ ನೋಡಿದರೆ ಆಕಡೆ ಕಾಣಿಸುವಂತಹ ಪಟಿಕದಂತಹ ಹಿಡಿ-ಬಿಚ್ಚಿ ನೋಡಿದೆ. ಕೃಷ್ಣಪರಮಾತ್ಮ ಗೋವರ್ಧನಗಿರಿಯನ್ನೆ ಛತ್ರಿಯನ್ನಾಗಿ ಮಾಡಿ, ಎತ್ತಿ ಹಿಡಿದಂತೆ ಭಾಸವಾಯಿತು. ಛತ್ರಿ ಒಳಗೆ ಬರದಿದ್ದ ರೇಖೆ ಗುರ್ತುಗಳು ಗಿರಿ ನದಿಯ ರೂಪವನ್ನೇ ಕಾಣಿಸುತ್ತಿದ್ದುದರಿಂದ.

ಇನ್ನೇನು ನನ್ನ ಜೀವನ ಸುಗಮವಾಯ್ತು ಎಂದಂದುಕೊಂಡೆ. ಪರ್ಜನ್ಯ ಜಪಮಾಡಿದರೂ ಮಾಡಲಿ. 'ಹುಯ್ಯೋ ಹುಯ್ಯೊ! ಮಳೆರಾಯ' ಅಂತ ಬಲಿಕೊಟ್ಟರೂ ಕೊಡಲಿ, ನನ್ನ ದಿನಚರೀಗೆ ಕೊಡೆ ಇದೆಯಲ್ಲಾ ಎಂದು: ಗಾಂಢೀವಹೊತ್ತ ನರನಂತೆ ಮೆರೆದೆ.

ದಿನಾಗಲೂ ಛತ್ರಿಧೂಳು ಹೊಡೆದು, ಆಫೀಸಿಗೆ ತೆಗೆದುಕೊಂಡು ಹೋಗು ವುದು, ಜೋಪಾನವಾಗಿ ಯಾರಿಗೂ ಸಿಕ್ಕದಂತೆ ಅದನ್ನು ಬೀರು ಹಿಂದೆ ಬಚ್ಚಿಡು ವುದು, ಸಾಯಂಕಾಲ ತಿರುಗಿ ಅದನ್ನು ಮನೆಗೆ ತರುವುದು. ಇದೇ ದಿನ ಚರಿಯಾಯ್ತು.

ಸಾಯಂಕಾಲ ನಾಲ್ಕು ಐದು ಗಂಟೆ ಆಯ್ತು ಅಂದರೆ ಕಛೇರೀಲಿ ದೀಪ ಹಾಕಿಕೊಳ್ಳಬೇಕು. ಅಷ್ಟು ಮೋಡ ಕವಿಯೋದು, ಕೃತ್ತಿಕೆ ಮೋಡಗಳು ಈ ಮೋಡಗಳು ಏನಾದರೂ ಸಂದೇಶ ತಂದಿದೆಯೋ ಅನ್ನೋಹೊತ್ತಿಗೆ ಆಫೀಸರು ಕ್ಲಬ್ಬಿಗೆ ಹೊರಡೋದು. ನಾನು ಛತ್ರಿಪಾಣಿಯಾಗಿ ಹೊರಡೋದು, ಯಾವ ಮಳೆ ಬಂದರೇನಂತೆ ಅಂತ ಹುಮ್ಮಸ್ಸಿನಲ್ಲಿ—ಈ ಛತ್ರಿ ನೋಡೇ ಭಯಪಟ್ಟಂತೆ ಬೌ, ಬೌ ಅಂತ ಒಂದೆರಡು ಸಾರಿ ಗುಡುಗಿ, ಆ ಕೃತ್ತಿಮದ ಮೋಡಗಳೆಲ್ಲಾ ಚೆದುರಿ ಬೇರೆ ಸಂಸ್ಥಾನಕ್ಕೆ ಹೋಗಿ ಅಯ್ಯೋ! ಎಂದು ಕಣ್ಣೀರಿಡುವುದು. ಕೃತ್ತಿಕೆ ನಕ್ಷತ್ರ ನಾಲ್ಕು ಪಾದಗಳೂ ಛಟ್‌ಆಗೋತನಕ ದಿನಾ ಸಾಯಂಕಾಲ ಇದೇ

ನಿಯಮ ಕಡೆಗೆ ಬೇಜಾರಾಯ್ತು. ಎಲ! ಎಲಾ! ಒಂದು ದಿನವಾದರೂ ಈ ಹಾಳು ಛತ್ರಿಯನ್ನು ವ್ಯೆ ಬಿಚ್ಚಿಸಿ ಮೆರೆಸೋಣ ಅಂದರೆ ಆಗಲಿಲ್ಲವಲ್ಲ! ಇದಕ್ಕೆ ನನ್ನ ಬೆಳ್ಳಿ ಕಟ್ಟಿನ ಮಾವ ಕೊಟ್ಟ ಊರಿಗೋಲನ್ನೇ ಗಿರವಿ ಇಟ್ಟ ನಲ್ಲಾ ಎಂದು ಸಂತಾಪಕ್ಕೆ ಶುರುವಾಯ್ತು.

ರೇಗಿ ಕಡೆಗೊಂದುದಿನ ಈ ಛತ್ರಿಯನ್ನೇ ಗಿರವಿ ಇಟ್ಟೆ. ನಾಲ್ಕು ರೂಪಾಯಿ ಸಿಕ್ಕಿತು. ಮೂರುದಿನ ಹೊಸದಾಗಿ ಬಂದ ದೋಸೆ ಮಾಸಲು ದೋಸೆಯನ್ನೆ ತಿಂದು ಬಿಟ್ಟೆ.

ನಾಲ್ಕನೇ ದಿನ ಹೊರಹೊರಟೆ ನೋಡಿ. ಒಂದು ಗಾಳಿ ಶುರುವಾಯ್ತು. ಇನ್ನೇನಪ್ಪಾ ಅಂತ ಒಂದು ಮರ ಒರಗಿ ಕೊಂಡೆ. ಆ ಮರ ಬಿದ್ದು ಹೋಯ್ತು. ಎಲಾ! ದೋಸೆ ಇಷ್ಟು ಶಕ್ತಿ ಕೊಡುತ್ತಯೇ ಎಂದಂದು ಕೊಳ್ಳುವಷ್ಟರಲ್ಲೇ ಆನೆಕಲ್ಲು ಮಳೆ ಬೀಳುಕ್ಕೆ ಶುರುವಾಯ್ತು. ಏನು ಮಳೆ ಅಂತೀರಿ. ಎದುರಿಗೆ ಎರಡಡಿ ದಾರಿ ಕಾಣುತ್ತಿತ್ತಿಲ್ಲ. ನನಗೆ ಮೂಳೆ ಮೂಳೆನೆಂದು ಹೋಗಿತ್ತು.

ಮನೆ ಸೇರೋ ಹೊತ್ತಿಗೆ ರಾತ್ರಿ ಎಂಟುಗಂಟೆ ಕಗ್ಗತ್ತಲು. ನಡುಗುತ್ತ ನಡುಗುತ್ತ ಕಂಬಳಿ ಉಟ್ಟು ಧಾವಳಿಹೊದ್ದು ಮಲಗಿದೆ.

ಬೆಳಿಗ್ಗೆ ಎದ್ದಾಗ ಮನೆಯೆಲ್ಲಾ ಸೋರಿದ ನೀರು. ವಹವ್ವಾ! ವಹವ್ವಾ! ನಾನು ಛತ್ರಿ ಗಿರವಿ ಇಟ್ಟದ್ದರಿಂದಲೇ ಈ ಮಳೆ. ನಾಳೆ ಆಳಧಿಕಾರಿಗಳ ಹತ್ತಿರ ಹೋಗಿ "ಮಹಾಸ್ವಾಮಿ ಹೀಗೆ ಹೀಗೆ ಆಯ್ತು. ಆದ್ದರಿಂದ ಮಳೆ ಬರೆಸಿದ ನನಗೆ ಒಂದು ಇನ್‌ಕ್ರಿಮೆಂಟ್ ದಯಪಾಲಿಸಬೇಕು. ಪರ್ಜನ್ಯ ಜಪಕ್ಕೆ ಐನೂರು ಕೊಟ್ಟೆರಿ. ಹುಯ್ಯೋ! ಹುಯೋ ಮಳೆರಾಯ ಸಂಘಕ್ಕೆ ಐನೂರು ಕೊಟ್ಟರಿ. ಮಳೆ ತರಿಸಿದನಂಗೆ ಐದು ಕೊಡಿ" ಎಂದ ಅಂಗಲಾಚಿ ಬೇಡಿಕೊಂಡೆ.


'ಇದು ನಿನ್ನ ಕೆಲಸ ಮಾತ್ರವೋ! ನಾನು ಒಂದು ಶ್ವೇತ ಛತ್ರಿ ಕೊಂಡಿದ್ದೆ. ಅದನ್ನು ಮಾರಿದ್ದರಿಂದಲೇ ಹೀಗೆ ಮಳೆ ಬಿತ್ತು. ಹೊಳಡಾಚೆ' ಅಂತ ಆತ ಒದ್ದ. ದಿಟವಾಗಲೂ ಕಾಲಿಂದ ಒದ್ದ. ಚಪ್ಪಲಿಕಾಲಿಂದ ಒದ್ದ.


ಎಚ್ಚೆತ್ತೆ! ನೋಡಿದರೆ ಚಾಪೆ ತುದೀಲಿ ಛತ್ರಿಮೇಲೆ ಹೊರಳಿದ್ದೆ.


ಅಲ್ಲಾ! ಭವಿಷ್ಯ ನುಡಿದಿದ್ದು ಹಾಗಿರಲಿ. ಕನಸಿನಲ್ಲಿ ನಡೆದದ್ದು ನನ ಸಾದೀತೋ ಎಂಬ ಭಯದಿಂದ ಛತ್ರಿ ಮಾರಲೇ ಇಲ್ಲ ಮಳೆಯೂ ಬರಲೇಇಲ್ಲ.


" ನ. ಗು. ಮಾಸ್ತೆ. "

* * * * *









★ ಅಪ್ಪನಿಗೆ ಕಾಗದ ★

ಅಪ್ಪಾ !

ಶನಿವಾರ ಹಳ್ಳಿ ಬಿಟ್ಟು ಬಸ್ಸಿನಲ್ಲಿ ಹೊರಟಾಗ ಮಧ್ಯಾಹ್ನ ಮೂರು ಗಂಟೆ. ಸುಮಾರು ಆರು ಗಂಟೆ ಹೊತ್ತಿಗೆ ಕಣ್ಣು ಬೆಳಕಿನಲ್ಲೇ ಪಟ್ಟಣ ಸೇರಿದೆ. ಶ್ರೀ........ರ ಮನೆಯೂ ಸಿಕ್ಕಿತು. ಅವರು ಯಾವ ಕಾಲೇಜು ಸೇರಬೇಕು ಎಂದು ಕೇಳಿದರು, ಹೀಗೆ ಇಂತಹ ಕಾಲೇಜು ಎಂದೆ ಆ ಕಾಲೇಜು ಎಲ್ಲಿದೆ. ಪ್ರಿನ್ಸಿಪಾಲರು ಯಾರು ಎಂದು ಕೇಳಿದೆ. ಅವರಂದರು ಅದನ್ನೆಲ್ಲಾ ಆ ಮೇಲೆ ನೋಡಿಕೊಬಹುದು. ಸದ್ಯ 'ಸೀಟು' ಸಿಗೋಹಾಗೆ ಮಾಡಿಕೋಬೇಕು ಎಂದರು. ಈ ಹತ್ತು ದಿವಸಗಳನ್ನೂ ಅವರ ಹತ್ತಿರ ಇವರ ಹತ್ತಿರ ಕಾಗದ ಇಸುಕೊಂಡು, ಚುನಾವಣಾ ಸಮಿತಿಯ ಎಲ್ಲಾ ಮೆಂಬರುಗಳನ್ನೂ ನೋಡಿದೆ ಅವರ ಮನಸ್ಸು ಕರಗುವಂತೆ ಮಾತನಾಡಿ ಅವರಿಂದ ಸೀಟು ಖಂಡಿತ ಎಂಬ ಭರವಸೆ ಪಡೆದೆ. ಮನೆಗೆ ಬಂದು ಹೀಗೆ ಹೀಗೆ ಎಂದು ಹೇಳಿದೆ. ಆಗ ಶ್ರೀ....ರು ಅಂದರು " ಅಯ್ಯೋ ! ಹೋದವರಿಗೆಲ್ಲಾ ಅವರು ಹಾಗೇ ಹೇಳುವುದು. ಬರೀ ಸಮಿತಿ ಮೆಂಬರುಗಳೇ ಸಾಲದು. ಇನ್ನೂ ದೊಡ್ಡವರನ್ನು ಹಿಡಿಯಬೇಕು " ಎಂದರು.

ಮಾರನೇ ಮೂರು ದಿನಗಳಲ್ಲಿ ಮೂರು ಬಂಗಲೆ ಕಾದು ದೊಡ್ಡವರನ್ನ ಹೊತ್ತಿಲ್ಲದ ಹೊತ್ತಿನಲ್ಲಿ ನೋಡಿದೆ. ಮೊದಲೆರಡೂ ಯಥಾಪ್ರಕಾರದ ಭರವಸೆ ಕೊಟ್ಟುವು. ಮೂರನೆಯವರು "ಇದೇನಯ್ಯಾ! ನೀನು ಪಟೇಲ್ ಆರ್. ಎನ್. ಎಂದು ಹೆಸರಿಟ್ಟುಕೊಂಡಿದಿ ? ಸರ್ದಾರರಿಗೆ ಏನಾದರೂ ಸಂಭಂದವೇ?" ಅಂತ ಕೇಳಿದರು. ನನಗೆ ಸುತ್ತಿಸುತ್ತಿ ಕಾಲು ನೋವುತ್ತಿತ್ತು. ಟೊಂಕ ಬಿದ್ಹೋಗೊಹಾಗೆ ಆಗಿತ್ತು. ತಲೆ ಗುಂಯನ್ನುತ್ತಿತ್ತು. "ಹ್ಞಾ, ಅವರೇ ತಮ್ಮ ಹತ್ತಿರ ಕಳಿಸಿದರು ನನ್ನ, ಅವರ ಪರಿಚಯ ನಿಮಗೆ ಚೆನ್ನಾಗಿದೆಯಂತೆ. ಇಂತಹವರನ್ನು ನೋಡು ನನ್ನ ಮೇಲಿನ ವಿಶ್ವಾಸಕ್ಕಾಗಿಯಾದರೂ ನಿನಗೆ ಸಹಾಯ ಮಾಡುತ್ತಾರೆ" ಎಂದು ಒಂದು ಸುಳ್ಳು ಆಡೇಬಿಟ್ಟೆ. ಆತ ಬಹು ಒಳ್ಳೆಯವರು; ತುಂಬಾ ಜನರು ಕಾದಿದ್ದರು. ಅದಕ್ಕೋಸ್ಕರ ಕಾಗದ ಗೀಗದ ಬರೆಯಲು ಪುರುಸೊತ್ತಿಲ್ಲ. ನೆಟ್ಟಗೆ ಫೋನ್ ತೆಗೆದುಕೊಂಡು ಯಾರಿಗೋ ಫೋನ್ ಮಾಡಿ ಪಟೇಲರ ಕಡೆಯ ಹುಡುಗನೊಬ್ಬನನ್ನು ಕಳಿಸುತ್ತೀನಿ. ಅವನಿಗೆ ಒಂದು "ಸೀಟು" ಕೊಡಲೇಬೇಕು ಎಂದರು. ನನ್ನನ್ನು "ಹೋಗಿ ಬಾ, ಸರ್ದಾರರು ಸಿಕ್ಕಾಗ ಅವರಿಗೆ ಹೇಳು, ನಾನು ಕೇಳಿದೆ ಅಂತ ಅವರಿಗೆ ನನ್ನ ಜ್ಞಾಪಕ ಚೆನ್ನಾಗಿರ ಬೇಕು. ವೇದಿಕೆಮೇಲೆ ಭಾಷಣ ಮಾಡಿದಾಗ, ಇಪ್ಪತ್ತು ವರ್ಷಗಳ ಹಿಂದೆ ನಾನೇ ಜಮಖಾನದ ತುದಿಯಲ್ಲಿ ಕುಳಿತಿದ್ದು, ಅವರಿಗೆ ಒಂದು ಲೋಟಾ ನೀರೂ ಕೊಟ್ಟೆ" ಎಂದು ಕಳಿಸಿಕೊಟ್ಟರು.

ಈಗೇನೋ ಸೀಟು ಖಂಡಿತ. ಆದರೆ ಪ್ರಿನ್ಸಿಪಾಲಕರು ಪಟೇಲರಿಗೆ ಹೇಗೆ ಸಂಭಂದ ಅಂತ ಕೇಳಿದರೆ ಏನು ಹೇಳಲಿ. ದಿಟ ಹೇಳಿಬಿಡಲೇ . ನನ್ನ ಹೆಸರು ಪಟೇಲ್ ರಾಮೇಗೌಡನ ನಾರಣಪ್ಪ ಅಂತ. ಅಥವಾ ಪಟೇಲ್ ಆರ್. ಎನ್. ಎಂದು ತೇಲಿಸೇಬಿಡಲೇ ? ದಯವಿಟ್ಟು ಬುದ್ಧಿವಾದ ಹೇಳಬೇಕು.

ನಾಳೆ ಕಾಲೇಜು ಎಲ್ಲಿದೆ ಅಂತ ಹುಡುಕುತ್ತೇನೆ. ಪ್ರಿನ್ಸಿಪಾಲಕರು ಯಾರೂ ಎಂದು ಕಂಡುಹಿಡಿಯುತ್ತೇನೆ. ಅಷ್ಟುಹೊತ್ತಿಗೆ ನಿಮ್ಮ ಜವಾಬು ಬಂದರೆ ಅದರಂತೆ ನಡೆದುಕೊಳ್ಳುತ್ತೇನೆ.

ಅಮ್ಮನಿಗೆ ನಮಸ್ಕಾರ ಹೇಳುವುದು

ನಿಮ್ಮ ಪ್ರೀತಿ ಮತ್ತು ಆಸ್ತಿಗೆ ಪಾತ್ರ.

ನಾರಣಪ್ಪ.

" ಅದಕ್ಕೆ ಇವ ಬೇಕೆ ? "

'ನಿಮ್ಮ ಹೆಂಡತೀನ ಹೊಡೆಯೋದು ಬಿಟ್ಟು ಎಷ್ಟು ತಿಂಗಳಾಯ್ತು ?'

ಇದೇ ಪ್ರಶ್ನೆ ನನ್ನ ಕೇಳಿದ್ದು ಬಾನುಲಿಯ ಕಾರ್ಯಕ್ರಮದಲ್ಲಿ.

'ನಾನು ಬಿಟ್ಟು ಮೂರು ತಿಂಗಳಾಯ್ತು. ಆದರೆ ನಮ್ಮ ಹುಡುಗ ಆ ಪುಣ್ಯಕೆಲಸವನ್ನು ಮುಂದುವರಿಸುತ್ತಿದ್ದಾನೆ' ಎಂದೆ.

ಹೀಗೆ ನನ್ನ ಮೊದಲ ಪರಿಚಯವಾದ್ದು ಶ್ರೀ... ಸೋಮಸುಂದರ ಐಯ್ಯಂಗಾರ್ ಅವರದ್ದು—ಅವರೇ 'ಕಾರ್ಯವಾಹ' ಅವತ್ತು.

ಆತನನ್ನು ನೋಡಿದರೆ 'ಮಳೇಲಿ ನೆಂದಹಾಗೆ ಆಗುತ್ತೆ. ಯಾರೇ ಸಿಕ್ಕಲಿ ಮೇಲೆ ಬಿದ್ದು ಮೈ ಪರಚೋಹಾಗೆ ಪ್ರಶ್ನೆ ಕೇಳುತ್ತಾನೆ. 'ನಿಮ್ಮ ಮಗನ ತಂದೆ ಮನೆಗೆ ಹೋದನೇ'—'ನಿಮ್ಮ ಸಂಪಾದನೆ ಎಷ್ಟೋ-ಸಂಬಳ ವಲ್ಲ ಸಂಪಾದನೆ ಅಂತ' ತೆರಿಗೆಯವನನ್ನು ಕೇಳೋದು—ಹೀಗೆ ಅವನರೀತಿ.

ಆದರೂ ಅವನ ಕೈಲಿ ಉಗುಳಿಸಿಕೊಂಡವರು ಅವನ ಮೇಲೆ ರೇಗಿಬಿದ್ದವರು, ಅವನ ಮೇಲೆ ಕೈ ಕೂಡ ಮಾಡಿದವರು ಎಲ್ಲರೂ ಅವನನ್ನು ಆಮೇಲೆ ಹೊಗಳೋದೇ-ಅವನು ನನ್ನ ಪ್ರೀತಿಪಾತ್ರ-ನನ್ನ ಸ್ನೇಹಿತ-ನನ್ನ ಆತ್ಮೀಯ ಅನ್ನೋದೆ !

ಇದರ ಮರ್ಮ ನನಗಿನ್ನೂ ಅರ್ಥವಾಗಿಲ್ಲ. ಕುದುರೆ ಜೂಜಿನಲ್ಲಿ ಗೆಲ್ಲೋ ಕುದುರೆಗಳನ್ನು ಗುರ್ತಿಸಬಲ್ಲೆ-ಮೀನಿನ ಹೆಜ್ಜೆ ಹಿಡಿದು ಅದನ್ನು ಹಿಂಬಾಲಿಸಬಲ್ಲೆ-ಹೆಂಡಿರ ಮನಸ್ಸನ್ನೂ ತಿಳಿಯಬಲ್ಲೆ ಆದರೆ ಈ ಮರ್ಮ-ಸೋಮಸುಂದರಯ್ಯಂಗಾರ್‍ಯನ ಮರ್ಮ ತಿಳಿಯಲಾರೆ.

ಆಮೇಲೆ ಗೊತ್ತಾಯಿತು ಆತ ಪ್ರಸಿದ್ಧ ವಿಜ್ಞಾನಿ ಅಂತ. ರಾಮಾನುಜಂತರಹ ಗಣಿತ ಪ್ರೌಢಿಮೆ ಉಳ್ಳವ ಅಂತ. ರಾಮನ್‌ರವರು ಅವನನ್ನು ಸಲಹೆ ಕೇಳುತ್ತಾರೆ ಅಂತ. ಈ ಶಸ್ತ್ರವೈದ್ಯ ನಿಪುಣರು ಇವನ ಬಾಗಿಲ ಕಾಯುತ್ತಾರೆ ಅಂತ. ಅದಕ್ಕೇ ಅವನೇನು ಅಂದರೂ ಎಲ್ಲರೂ ನಕ್ಕು ಆಹಾ ! ಎಂಥಾ ಹುಚ್ಚುಜಾಣ ಎಂತಾರೆ.

ಮೊನ್ನೆ ಕೇಳಿದಾಗ, ಕತ್ತಿ, ಕತ್ತರಿ ಇಲ್ಲದೇ ಹಿಡಿಕೂಡ ಇಲ್ಲದೆ ಇರುವ ಚೌರದ ಸಾಮಗ್ರಿಯನ್ನು ಕಂಡು ಹಿಡಿಯುತ್ತಿದ್ದಾನೆ ಅಂತ.

—ಇದಕ್ಕೆ ಅವನು ಬೇಕೆ—ನೆಟ್ಟಗೆ ಲಾಯರಾಗಬಾರದೇ ?

'ಅರ್ಚು'

———o———

ಕೊರವಂಜಿ

ಬಳೇಪೇಟೆ - - - ಬೆಂಗಳೂರು 2

ಬಿಡಿ ಪ್ರತಿ ಕೇವಲ ನಾಲ್ಕಾಣೆ

ವಾರ್ಷಿಕ ಚಂದಾ: ೩ ರೂ. (ಅಂಚೆ ವೆಚ್ಚ ಸಹಿತ)

— o —

ನಮ್ಮ ಮಾರಾಟಗಾರರು :

ಶ್ರೀ ಕೆ. ಎಂ. ಕೆ. ಶಾಸ್ತ್ರಿ,
ಬಳ್ಳಾರಿ.